ಉ॥ ಮಾಡಿಸಿ ನಾಱವಾಸಗೆಯನೊಯ್ಯನೆ ಮೇಳಿಸಿ ನಿಮ್ಮೊಳೊಮ್ಮೆ ಜೂ
ದಾಡಿಸಿ ಧರ್ಮನಂದನನನೊಪ್ಪಿರೆ ಗೆಲ್ದಡೆ ಸೋಲ್ತ ಸಿಗ್ಗಿನೊಳ್
ನಾಡುಮನೊಡ್ಡಿಯಾಡಿದೊಡೆ ಗೆಲ್ವುದು ಗೆಲ್ವುದು ಗೆಲ್ದ ಬೞಿಕ್ಕವಂದಿರುಂ
ನಾಡನೆ ಪತ್ತುವಿಟ್ಟು ಪಱುವಟ್ಟು ಕಱಿಲ್ದಘಪಟ್ಟುವೀಯರೇ
೨೩

ವ॥ ಎಂದೊಡಾ ಕಜ್ಜಮಂ ಮನಂಗೊಂಡು ದುರ್ಯೋಧನನಲ್ಲಿಂದಮೆರ್ದು ಪೋಗಿ ಗೂಢದೊಳ್ ನಾಱವಾಸಗೆಗಳಂ ಸಮೆಯಿಸಿ ತನ್ನ ಮನೆಯೊಳ್ ಪಿರಿದೊಂದೊಸಗೆಯಂ ಮಾಡಿ ಪಾಂಡವರಂ ಬರಿಸಿ ಕರಂ ಪ್ರಿಯಂಗೆಯ್ದಿರಿಸಿ ಮೇಳಮವರೊಳೆಂಬುದ ಕ್ಕೊಳ್ಳಿತ್ತು ಮೇಳಿಸಿರ್ದೊಂದು ದೆವಸಮವರುಂ ತಾನುಂ ಗೋಷ್ಠಿಯೊಳಿರ್ದುಮಲ್ಲಿ ಜೂದಂ ಪೊಣರ್ಚಿ ಪೆಱರನಾಡಿಸಿ ತಾಮುಂ ನೋೞ್ಪಮೆಗೆಯ್ದಿನಿಸುಪೊತ್ತು ನೋಡು ತ್ತಿರ್ದತಂತೆ ಮೇಳದೊಳ್ ನುಡಿಯುತ್ತಿರ್ದಣ್ಣ ನಾಮಾಡುವಮೆಂದು ದುರ್ಯೋಧನಂಧರ್ಮಪುತ್ರನೊಳ್ ತಗುಳ್ದಾಡುತ್ತಿರ್ದಲ್ಲಿ ಕೆಯ್ಯಡಕದೊಳ್ ದಿರಿಯೋಧನಂ ನಾಱವಾಸಗೆಯಂ ಪುಗಿಸಿಯಾಡಿ ವಸ್ತುವಾಹನಂಗಳೆಲ್ಲಮಂ ಗೆಲೆ ಶರಪ್ರಯೋಗದಿಂ ಗೆಲೆ ಭೀಮಾರ್ಜುನರ್ ಮಸಗಲ್ ಬಗೆದಣ್ಣಂಗಮಜಿ ಮಾಣ್ದರಾಗಳ್ ಧರ್ಮಜಂ ಸಿಗ್ಗಿನೊಳ್ ನಾಣ್ಚಿದಡೆ ಕೆಲದವರೆಂದರೀಯೊಡ್ಡಮಂ ಗೆಲ್ದರ್ ಪನ್ನೆರಡು ವರ್ಷಂಬರ ನಾಡನಾೞ್ವು ದೆಂದು ಸಮಕಟ್ಟಿದೊಡವಂತಪ್ಪಡಮಕ್ಕೆಂದಾಡಿ ಸೋಲ್ವಾಗಳೆ [ಶಕುನಿಯಂ] ನೋಡಿ ಕಣ್ಣಱಿದು ದುರ್ಯೋಧನಂ ನೀಂ ಸಾಲ್ಗುಮೆಂದೆರ್ದು ತನ್ನ ಮಾಡದೊಳಗಂ ಪೊಕ್ಕಂ ಧರ್ಮಪುತ್ರಾದಿಗಳ್ ತಂತಮ್ಮ ಬೀಡಿಂಗೆವಂದಿರ್ದು ಕಿಱಿದುಂ ಬೇಗದಿಂ ದುರ್ಯೋಧನಂ ತನ್ನ ಪೆರ್ಗಡೆಗಳನಟ್ಟಿದೊಡವರ್ ಬಂದುಮಿಂತೆಂದರ್

ಕಂ॥ ಜೂದಾಡಿ ಸೋಲ್ವುದಂ ತಾಂ
ಸೌಧರ್ಮಿಕೆ ಬಗೆಯದೀವುದೆಂದಟ್ಟಿದನೆಂ
ದಾದರದಿನವರ್ ನುಡಿದೊಡೆ
ಜೂದಂ ಸೋಲ್ತೀಯೆವೆಂಬ ಸಿತಗರುವೊಳರೇ ೨೪

ವ॥ ಬಂದೊಳ್ಳಿಕೆಯ್ದಿರ್ ಕೊಂಡು ಪೋಗಿಮೆಂದು ಸೋಲ್ತ ವಸ್ತುವಾಹನಂಗಳಂ ತರಿಸಿಕೊಟ್ಟು ನಾಡುಮನೊಪ್ಪಿಸಿ ಪೋದಪ್ಪೆಂ ಕೈಕೊಳವೀೞಿಮೆಂದುಮಟ್ಟಿ ಪಯಣಮಂ ಸಮಕಟ್ಟಿಸಿ ಇರುಳೆರ್ದು ನಡೆವಾಗಳ್ ಭೀಮಾದಿಗಳಕ್ಕುಮಾದೊಡೆನ್ನಂತಾದೊಡೆನ್ನನುಕ್ಕಲಿಸಿ ನೆಲನಂ ಕೊಂಡೈ ಪುಣ್ಯಮಂ ಕೊಳಲ್ ತೀರದೆಂದಣ್ಣನ ನನ್ನಿಯಂ ಸಲಿಸಲ್ವೇೞ್ಕುದೆಂದು ಪೊಱಲಿಂ ಪೊಱಮಟ್ಟು ಪೋದರರದಂ ಗಾಂಗೇಯಾದಿಗಳ್ ಕೇಳ್ದು ನೆಲನಂ ಗೆಲ್ದಾಮೇಗಿಂ ಕೊಟ್ಟರಿಸುವುದೆಂದು ನುಡಿದೆಂತುಮೊಡಂಬಡಿಸಲಾಱದೆ ಪೋದರಂತು ಪಾಂಡವರ್ ತಮ್ಮ ಪೊಱಲೊಳಿರ್ದ ಪೆಂಡಿರ್ ಮಕ್ಕಳೆಲ್ಲರುಮನೊಡಗೊಂಡು ನಾಡಂ ಬಿಸುಟ್ಟು ಪಯಣಂಬೋಗಿ ನದ ನದೀ ಗಿರಿ ಗುಹಾಗಹ್ವರಂಗಳು ಕಳಿದು ಗಂಗಾನದಿಯಂ ಪಾಯ್ದುನಡೆತಂದೊಂದೆಡೆಯೊಳೊಂದಾಲದ

ಮರದಡಿಯೊಳ್ ಬೀಡುವಿಟ್ಟಿರ್ದಲ್ಲಿಗಮಿತಮತಿ ಗಳೆಂಬಾಚಾರ್ಯರ್ವಂದಿರ್ದೊಡೆ ಬಲಗೊಂಡು ಬಂದಿಸಿ ಕುಳ್ಳಿರಿಸಿ ಧರ್ಮಮಂ ಕೇಳ್ದಱ ಸುಖದಿನಿರ್ದು ಬೞಿಯಂ ತಮ್ಮೊಡವಂದ ದ್ರುಪದ ಧೃಷ್ಟದ್ಯುಮ್ನಾದಿಗಳುಮಂ ಪೆಱರ ಮನವರ ಪೊೞಲ್ಗೆ ಪೋಗಲ್ವೇೞ್ದವರೊಡನೆ ಕೊಂತಿಮಹಾದೇವಿಯುಂ ದ್ರೌಪದಿಯು ಮಲ್ಲದುೞಿದ ಪೆಂಡಿರುಮಕ್ಕಳುಂ ಕಳಿಸಿ ತಮ್ಮಯ್ವರು ಮಾಯಿರ್ವರುಮನೊಡಗೊಂಡು ತೆಂಕಮೊಗದೆ ಪಯಣಂ ಬಂದು ಬದರೀವನಮೆಂಬ ಪೇರಡವಿಯಂ ಪೊಕ್ಕು ಋಷ್ಯ ಶೃಂಗ ಮೆಂಬ ಗಿರಿಯಂ ಕಂಡಲ್ಲಿ ನೆಟಿಲಂಚೆಯಂತೆ ನೆಟಿಲನೆ ತೋರ್ಪ ನೆಟಿಲ ಮರಂಗಳುಮಂ ಮಾಯಾವಡೆಯಂತೆ ಮೆಯ್ದೋಱಯದೃಶ್ಯಮಪ್ಪ ದಿವ್ಯಮೂಲಿಕೆಗಳುಮಂಬಸನಿಯಂತೆ ಪತ್ತಿದರೆನೆ ಪತ್ತುವ ವಜ್ರಲೇಪಂಗಳುಮಂ ಪೞುವೆಂಡಿರಂತೆ ಕಂಡ ಕಂಡರಂನೆ ಸಿಡಿವ ಮ[ರು]ಳ್ಮಾಟಂಗಳುಮಂ ಕಾಮದೇವನಂತೆ ರತಿಯೊಳ್ ಕೊಡುವ ದಂಪತಿಗಳುಮಂ ಮುಂಡೆಯ ತಲೆಯಂತೆ ಕೆಯ್ವಿಟ್ಟ ಸೀರೆಗಳುಮಂ ಮದಗಜದಂತೆ ಮರವಯ್ದ ಪುಲಿಗಳುಮಂ ತುಂಬಿಗಳಂತೆ ಮೊರೆದು ಪಾಯ್ವ ಪರ್ವಿಗಳುಮಂ ಸೊಕ್ಕಿದೊರಂತೆ ದೆಸೆದೆಸೆಗೆ ನರ್ತಿಸುವ ಸೋಗೆಗಳುಮಂ ನೋಡುತ್ತ ಬಪ್ಪರ್ ಮತ್ತಲ್ಲಿ

ಕಂ॥ ಉರಗಂಗಳ್ ಸುತ್ತಳಿದಿಱ
ತರುತಿರೆ ಬಿಡದವನೆ ಬಯಿಸಿ ತಿರಿತರುತೆ [ಯ್ತುಂ]
ದಿರದೆಡೆವಿಡದಡರ್ವುವು ಮುಂ
ಗುರಿ ಗಿರಿಕಂದರರದ ಮರದ ತುದಿಗೊಂಬುವರಂ ೨೫

ಕುಸಿದು ಕೊರಲ್ಗಳನನುನಯ
ದೆಸಕದ ಗಡಣ [ದಿ] ಮಡಗ [ಳ] ಗೞಿಯಂ ಸಮೞು
ತೋಸೆದಗ್ಗದ ಸೞ ಪೊರೆಗಳೊ
ಳೆಸೆದಿರ್ದವು ಪೊೞಸಿನೋಳಿಗಳ್ ಸೊಗಯಿಸುಗಂ ೨೬

ಲಲಿತ ರಗಳೆ॥
ತುಱುಗಿ ಪೂತೆಱಗಿ ಸೊಗಯಿಸುವ ಸುರಹೊನ್ನೆಯಿಂ
ಸುರಹೊನ್ನೆಗಳ ಕೆಲದೊಳೊದವಿದೆಳಲತೆಗಳಿಂ
ಲತೆಯ ಮನೆಗಳೊಳೊಸೆದು ನೆರೆವ ದಂಪತಿಗಳಿಂ
ದಂಪತಿಗಳಾರವಕೆ ನಲಿವ ಕಳಹಂಸೆಯಿಂ
ಕಳಹಂಸೆಗಳ ನಡೆಯಿಸಿಪ ಕಿನ್ನರಿಯರಿಂ
ಕಿನ್ನರಿಯರೊಡನೊಡನೆ ಮೊರವ ಪೆಣ್ದುಂಬಿಯಿಂ
ತುಂಬಿಗಳ ಮೊರೆಪಕ್ಕೆ ಸೋಲ್ತ ಹರಿಣಂಗಳಿಂ
ಹರಿಣಂಗಳಂ ಸಾರ್ದು ಬಂದೆಸುವ ಶಬರರಿಂ
ಶಬರರಂ ಮಸಗಿ ಬೆಂಕೊಳ್ವ ಮದಕರಿಗಳಿಂ

ಮದಕರಿಗಳಂ ಪೆಳಱಿ ಪಾಯ್ವ ಕೇಸರಿಗಳಿಂ
ಕೇಸರಿಗೆ ಪೆಳ್ಪಳಿಪ ತುರಗಮುಖಿಯರ್ಕಳಿಂ
ತುರಗಮುಖಿಯರನಣಮೆ ಱೋಡಿಸುವ ಕಪಿಗಳಿಂ
ಕಪಿಕುಳದ ತೊಂಡಿಕೆಗೆ ನಗುವ ಖೇಚರಿಯರಿಂ
ಖೇಚರಿಯರಂ ನೋಡಿ ನರ್ತಿಸುವ ಸೋಗೆಯಿಂ
ಸೋಗೆನವಿಲಾಡೆ ಕರಮೊಪ್ಪುವ ಪುಱಿಲ್ಗಳಿಂ
ಪುಱಿಲ ನೆಟಿಲೆಡೆಗಳೊಳು ಸುಱಿವ ತೆಂಗಾಳಿಯಿಂ

ಕಂ॥ ತೆಂಕಣಗಾಳಿಯ ಸೊಗಯಿಪ
ಸೋಂಕಿನೊಳಿರದೊಗೆದು ಮಿಱುಗಿ ತಳ[ತ]ಿಸುವ ಚೂ
ತಾಂಕುರವಮನೊಸೆದು ಕರ್ದುಕಿದ
ಬಿಂಕದೊಳೊಡನೊಲಿವ ನಲಿವ ಗಿಳಿವಿಂಡುಗಳಿಂ ೨೮

ವ॥ ಅಂತೊಪ್ಪುವ ಗಿರಿಪ್ರದೇಶಮ[ಂ] ಮೆಚ್ಚಿ ರಮ್ಯಪ್ರದೇಶದೊಳ್ ವಿಶ್ರಮಿಸುತ್ತಮಂತಾ ವನಪ್ರದೇಶಂ ಪ್ರವಾಸಂ ಮಾಡದೆ ಸಂತೋಷಮನೀಯೆ ಕೆಲವು ದೆವಸಮನಿರ್ದಲ್ಲಿಯೊಂದು ದೆವಸಮರ್ಜುನನಂತಂತೆ ವನವಿ[ಹರಣಂಗೆಯ್ಯುತ್ತ]ಮಿಂದ್ರಕೀಲ ಮೆಂಬ ನಗರಮಂ ಕಂಡಲ್ಲಿ ಪಸಿದು ಬಾಯ್ದೆಱೆದ ಪೆರ್ವಾವಿನ ಬಯಿಗಳಂ ಬಿಲಮೆಂದು ಪುಗವ ಬಿಲದಾದಿಗಳುಮ ನಿಂದ್ರಕೀಲದ ಕೋಡುಂಗಲ್ಲಂ ಕಾರ್ಮುಗಿಲೆಂದು ನಲಿದು ನರ್ತಿಸುವ ನವಿಲುಗಳಂ ಪದ್ಮರಾಗದ ಪೆ[ರ್ವಿ]ದಿರ ರಶ್ಮಿಗಳನೆಳೆ ವಿಸಿಲೆಂದು ಬಿಸಿಲ್ಗಾಯ್ವಪನ್ನಗಂಗಳುಮಂ ಪಚ್ಚೆಯಶಿಲೆಯಂ ತಾವರೆಯೆಲೆಯೆಂದು ಕರ್ದುಂಕುವ ಕೋಗಿಲೆಗಳುಮಂ ಚಂದ್ರಕಾಂತದ ಶಿಳಾತಳಮಂ ತಿಳಿಗೊಳನೆಂದು ಪರಿತಪ್ಪ ಹರಿಣಂಗ[ಳುಮಂ] ಸ್ಫಟಿಕೋಪಳಂಗಳಂ ಬಯಲ್ಗೆತ್ತುತಾಗಿ ಪೆಡಂಮಗುಟ್ಟಿ ಮದೇಭಂಗಳೂಮಂ ಚೋದ್ಯಂಬಿಟ್ಟು ನೋಡುತ್ತಂ ಬರ್ಪೊಂದೆಡೆಯೊಳೊಂದು ಪೆರ್ವಿದರ

ಹರಿಣಿ॥
ಪೊದಱ ತುದಿಯೊಳ್ ಭಾಸ್ವದ್ವಿದ್ಯಾಧರೇಂದ್ರನನೊರ್ವನಂ
ಸದಭಿನುತನಂ ತೊಣ್ಣಂ ಕಟ್ಟಿಕ್ಕಿ ಪೋದನುದಗ್ರ ನೀ
ರದಪಥಚರಂ ಬಲ್ಲಳ್ ಮತ್ತೊರ್ವನೆಂದಱಿದೆಯ್ದೆ ಬಂ
ದ[ಧಿಕ] ಗಣನಂ ಪರ್ಥಂ ಕಾರುಣ್ಯಭಾವದೆ ನೋಡಿದಂ
೨೯

ವ॥ ನೋಡಿಕಟ್ಟಂಬಿಡುವೊಡೆಯೆವ.......ನಂದುಬಿಲ್ಲನೇಱಿಸಿಕೊಂಡುಪೊದಱ ಮೊದಲನಿರ್ಚಾಯನಪ್ಪಂಬಿನೊಳೆಚ್ಚಾ ಗಳೊರ್ಮೊದಲೆ ಮೊದಲಿಂದಂ ಕೆಡೆಯೆ ಬಂದು

ವಿದ್ಯಾಧ......ವಂತೆ ಬಿಡಿಸಿದಾಗಳಾತಂ ನಿನ್ನ ಮಹಾಪ್ರಸಾದದಿಂ ಬರ್ದೆನೇವೆ ನೀನಾರ್ಗೇಕೆ ಕಟ್ಟುಪಟ್ಟೆಯೆಂದೊಡಾನುತ್ತರಶ್ರೇಢಿಯ ವಿದ್ಯಾಧರನೆಂ ಇಂದ್ರರಥ..........ನೊರ್ವನೆನ್ನ ಪಗೆವಂ

ಕಂ॥ ಇಟ್ಟೆಡೆಯಾಗಿರೆ ಖಚರಂ
ತೊಟ್ಟನೆ ಕೊಳೆ ಬಂದು ಪಿಡಿದುಕೊಂಡಂ......
.........................ಕುದಿದುಂ
ಕಟ್ಟಿನೊಳಾನವರಭವತೆಱದಿಂ ಬೆಂದೆಂ (?) ೩೦

ವ॥ ಇರುಳು ಕಟ್ಟಂ ಕಳೆದಾಱಿಸಿದೊಡಾಱಿದೆನೆನ್ನಳಿಪಂ ತೋಱಿದೆನೆನ್ನಱಿದ ವಿದ್ಯೆಗಳಂ ನೀನೆಸಾಧಿಸಿಕೊಳ್ಳೆಂದು ಮಂತ್ರಪದಂಗಳುಮಂ ಸಧನೋಪಾಯಯುಮಂಪೆಳ್ದಿಡಾ ಕ್ರಿಯೊಯೊಳ್ ವಿದ್ಯೆಗಳಂ ಸಧಿಸಿಕೊಂಡಿರ್ಪಿನ ಮಾತನಂ ಕೊಲಲೊಲ್ಲದೆ ಕಟ್ಟಕ್ಕಿ ಪೋದ ಮೇಘರಥಂ ತನ್ನ ಸಾಹಸಮಂ ತೋಱಲ್ ತನ್ನವರನೊಡಗೊಂಡು ಒಂದು ಮೊಕ್ಕನೆವೋಗಿ ಕೆಡೆದ ಪೊದಱುಮನ್ನವೃತ್ತಿಗಂ ತಂತ್ರಕ್ಕಿರಲೆಡೆವಡೆದಂತೆ ಬೀಡು ವೆತ್ತಿರ್ದಿಂದ್ರರಥನುಮಂ ಆತನಂ ಬಿಡಿಸಿ ನೋವನಾಱಿಸಿ ಮೇಗಿಲ್ಲದಂತಿರ್ದರ್ಜುನನುಮಂ ಕಂಡು ಬೆಕ್ಕಸಂಬಟ್ಟು ನೋಟ್ಟನನರ್ಜುನಂ ಕಂಡೀತನಾರ್ಗೆಂದಿಂದ್ರರಥನಂ ಬೆಸಗೊಂಡೊ
ಡೀತನಲ್ತೆ ಮುಳಿದೆನ್ನನಿಲ್ಲಿ ಪೊದಱೊಳ್ ಬಲ್ಗಂಡಿಕೆಯಿನಾಳೆಮೆಟ್ಟಿದೊನೆಂದೊಡರ್ಜುನನಾ ಬಂದಾತನನಿಂತೆಂದಂ

ಕಂ॥ ಮಱಹಿಕ್ಕಿ ಪಿಡಿದು ಕಟ್ಟದ
ಮಱುಕಮ ನೀನಿಂತು ತೋರ್ಪೆಯಣ್ಮೆಲೆ ನೀನೀ
ನೆಱುಕದ ಚತುರ್ವಲ ಸಹಿತಂ
ತಱಿಸಂದೆನೀದಿರೊಳಾಂತುಂ ತೋರ್ಪುದು ಛಲಮಂ ೩೧

ವ॥ ಎಂದು ಮಾತಿಂಗೆ ಮೇಘರಥ[೦.....ಕಿನಿ]ಸಿ ಕಯ್ದುಗೆಯ್ಯಲ್ ಬಗೆದಾಗಳಾ ತನ ಪಡೆ ಮಸಗಿ ತಮ್ಮಾಳ್ದನಂ ಪೆಱಗಿಕ್ಕಿ ನೂಂಕಲ್ ಬೆದಾಗಳರ್ಜುನಂ ಬಿಲ್ದೆಗೆದೆಚ್ಚೊಡಂಬಿನೊಳ್ ಪಡೆಯೆಲ್ಲಮೊಡನೆ [ಮ]ಮ್ಮಱಿಯಾ [ಗೆ]ಮೇಘರಥಂ ನಿದ್ಯೆಗಳಂ ಬೆಸಸಿದಾಗಳ ಪಾರ್ಥಂ ಪ್ರತಿವಿದ್ಯೆಗಳಿಂ ಭೇದಿಸಿ ಗೆಲೆ ಮೇಘರಥಂ ಬೆಳ್ಕುತ್ತ ಗಗನಮಾರ್ಗದಿನೋಡುವನ ನಿಂದ್ರರಥನಿಯ್ದಿ ಪೆಡಿದು ತನ್ನ ಕಟ್ಟದಂತಾತನಂ ಕಟ್ಟತಂದರ್ಜುನನ ಮುಂದಕ್ಕಿದೊಡರ್ಜುನಂ ಕಂಡು ಕರುಣಿಸಿ ಕಟ್ಟಂ ಬಿಡಿಸಿ ನೀನಿನ್ನೀತಂಗಂಜಿ ಬೆಸಕೆಯ್ದು ಬಱಿಂದು ಕಳುಪಿದನಾಗಳಿಂದ್ರರಥನರ್ಜುನನನತ್ಯಾಗ್ರಹಂಗೆಯ್ದು ವಿಮಾನನುನೇಱಿಸಿ ತನ್ನ ಪೊಱಲ್ಗೊಯ್ದು ಪಲವುಂ ವಸ್ತುಗಳಂ ವಿದ್ಯೆಗಳಂ ಕೊಟ್ಟು ಮಗಱಿ ಕಳಿಸಿದೊಡರ್ಜುನ[೦]ನಡೆಯಿಂದಂ ಮಗುಳ್ದಿಣ್ಣನಲ್ಲಿಗೆವಂದೊ ಡಿನ್ನೆಗ ಮೊತ್ತ ಪೋದೆಯೇಕೆ ತಡೆದೆಯೆನೆ ತತ್ಪ್ರಪಂಚಮನತಿಯೆಪೇಱಿ ತಮ್ಮನ ಸಾಹಸಮಂಮೆಚ್ಚಿ ನಚ್ಚಿ ಸಒತೋಷದೊಳಿ

ರ್ದಲ್ಲಿಂದಮಂತೆ ಬಂದು ಮಹಾನದಿಯಂ ಪಾಯ್ದು ಶ್ರೀ ಪರ್ವತದಾಸನ್ನಪಥಡೊಳ್ ಪಯಣಂಬೋಗಿ ಕಾಂಚೀಪುರದೊಳ್ ವಿಶ್ರಮಿಸಿರ್ದು ಕೆಲವು ದೆವಸದಿಂ ಪಶ್ಚಿಮಾಭಿಮುಖರಾಗಿ ಪಯಣಂ ಬಂದು ಬನವಾಸಿದೇಶದೊಳ್

ಚಂ॥ ಸುರಭಿತರ ವನರಾಜಿಗಳಿಂ ಕಮನೀಯ ಪದ್ಮಸುಂ
ದರನ್ ಜಲಖಾತಿಕಾವಳಯದಿಂ ಕರಮುನ್ನತಮಪ್ಪ ಕೋಟಿಯಿಂ
?[ಸುರಪ]? ನರೇಂದ್ರ ನಿರ್ಮಿತ ಜಿನಾಲಯದಿಂ ಸೊಗಸಿಪ್ಪುದಂ ಮನೋ
ಹರತರಮಂ ವಿರಾಟಪುರಮಂ ಸುಖದಾಗರಮಂ ಸರಾಗದಿಂ ೩೨

ವ॥ ಪೊಕ್ಕು ತೀರ್ಥನಾಥ ಜಿನಾಲಯಮಂ ಕಂಡು ಬಲಗೊಂಡು ಜಿನೇಂದ್ರಂಗೆ ನೊಸಲೊಳ್ ಕೆಯ್ಯನಿಟ್ಟು ಪೊಡೆವಟ್ಟು ಕ್ರಿಯಾಪೂರ್ವಕಂ ಸ್ತುತಿಯಿಸಿ ಋಷಿಸಮುದಯಮಂ ಯಥಾಕ್ರಮದಿಂ ಬಂದಿಸಿ ಕಿಱಿದುಪೊತ್ತು ವಿಶ್ರಮಿಸಿರ್ದಿಂತಪ್ಪ ತೀರ್ಥಸ್ಥಾನದೊಳಿರ್ಪುದೊಳ್ಳಿತ್ತೆಂದು ತಮ್ಮೊಳಾಳೋಚಿಸಿ ಪೆಱವು ವೆಸರ್ಗಳಂ ತಮಗೆ ಮಾಡಿಬೇಱವೇಱ ನಿಯೋಗದೊಳ್ ಮನೆವನೆಗಳಂ ಕೈಕೊಂಡಿರ್ದರತ್ತ ದುರ್ಯೋಧನನಾ ಸ್ಥಾನಿಕೆಯೊಳ್ ಶಕುನಿ ಬಿನ್ನಪಮೆಂದಿಂತೆಂದಂ

ಕಂ॥ ಪನ್ನೆರಡು ವರ್ಷದವಧಿಯ
ದಿನ್ನೆವರಂ ನೆಱಗುಮವರ ವೃತ್ತಿಯನಾರ
ಯ್ವನ್ನವು ನೆಗೞ್ತವೇೞ್ಪುದು
ನನ್ನಿಗೆ ಮಾಣ್ದಿರ್ದರುಂತವರ್ ಮಾಣ್ದಪರೇ
೩೩

ವ॥ ಎನೆ ದುರ್ಯೋಧನನವರಿನ್ನೆಲ್ಲಿರ್ದುಮೇವರೆಂದುದ್ಧತನಾಗಿ ನುಡಿಯೆ ಭೀಷ್ಮನೆಂದಂ ಮೃಗಗಣಂ ಸಿಂಗಮ ನಱಸುವುದುಂ ಪಕ್ಷಿಗಳುಂ ಗರುಡನಂ ಬಗೆಯದುದುಂ ಮಾನಸರ್ ಪಾಂಡವರನಿಱಸುವುದುಂ ಮರುಳ್ತನಮೆನೆ

ಕಂ॥ ಕೊರಲ ಸೆರೆ ಬೀಗಿ ಬೆಮರು
ತ್ತಿರೆ [ಮೈ] ಕಣ್ ಕೆಚ್ಚನಾಗೆ ಬಾಯಿಪೊರ್ಡು
ತ್ತಿರೆ ಪುರ್ವು ಕಿಱುಪೆ ಕಡುಬಂ
ಕುರುಪತಿ ಭೀಷ್ಮಂಗೆ ಕಿನಿಸಿ ಕಿಂಕಿಱವೋದಂ ೩೪

ವ॥ ಅಕ್ಕು ನೀಮಾಗಳಾದೊಡಮವರನೆ ಸಿರಿಯರುಮರಿಯರು ಮಾಡಿ ನುಡಿವಿರೆನ್ನ ಬೀಡಿನೊಳಾವಂಗೆ ಸಮನವರೆಂ ದಿಂತೆಂದಂ

ಕಂ॥ ಕರ್ಣಂಗೆ ದಾಣಗುಣ ಸಂ
ಪೂರ್ಣತೆಗೆ ವಿನೂತ ವಿಪಳದವೊಱ ಯಶೋವಿ
ಸ್ತೀರ್ಣಂಗೆ ಬಗೆದು ನೋಡೆ ಮ

ಹಾರ್ಣವ ಪರ್ಯಂತ ಧರೆಯೊಳೇಂ ದೊರೆಯೊಳರೇ ೩೫

ವ॥ ಆತನಳವನೇವೇೞ್ವುದೀ ಕೃಪ ಕೃತವರ್ಮ ದ್ರೋಣಾಚಾರ್ಯ ಭಗದತ್ತ ಸೈಂಧವ ಶಲ್ಯ ದುಶ್ಶಾಸನಾದ್ಯನೇಕ ರಾಜಕುಮಾರರನಾರಂ ಪೇೞ್ವುದೆಂದುಚ್ಚಾಟಿಸಿ ನುಡಿದಂ ಬಱಿಯಮಿನಿಸರಸಾಳ್ತನಮಂ ಬಗೆದು ಮತ್ತಂಭೀಷ್ಮನೆಂಗುಮಂತೆ ನಿನ್ನ ಪುರುಷ ಸಂಗ್ರಹದ ಬಲ್ಲಾಳ್ತನದಳವಳುಂಬಮಾದೊಡಂ ಮುದುಗಣ್ಗಳ ಮಾತಂ ಕೇಳ್ವುದಾರಯ್ವುದೆಂದಾಱಿ ನುಡಿದೊಡಂಬಡಿಸಿ ಚರರಿರ್ವರ್ರನೊಳ್ಪಿತ್ತಾರಯ್ದು ಬನ್ನಿಮೆಂದಟ್ಟಿದೊಡೆ ಕೆಲವು ದೆವಸದಿಂ ಬಂದಾ ಚಾರರೊಂದರಗಿನ ಮಾಡದಿಂ ಪೋಪು ಪಾಯಮಾದಿಯಾಗೆ ವಿರಟಪುರ ಪ್ರದೇಶಂಬರಮಾದವಸ್ಥಾಂತರಮುಮನಲ್ಲಿಯೆ ಮೆಯ್ಗರೆದಿದ್ರ್ದುಪಾಯಮುಮನವದಿ[ರ್] ನೆರೆದೊಡೆ ಬರ್ಪೆಮೆಂಬುದುಮಂ ಬಂದ ಬಲ್ಲಾಳ್ತನಮುಮನೊಳ್ಪಿತ್ತಾರಯ್ದಱಿದು ಬಂದು ಬಿನ್ನಪಂಗೆಯ್ದಾಗಳೆಕುರುರಾಜಂ ತನ್ನಲ್ಲಿ ಬುಧಿಯುಳ್ಳರುಮಂ ಪ್ರತಾಪಮುಳ್ಳರು ಮನೊರ್ಬುೞಿಗೆದಂದು ಏಕಾಂತಮಿರ್ದಿನ್ನೇಗೆಯ್ವಮೆನೆ ಸುಶರ್ಮನೆಂಬ ಮಂತ್ರಿಯಿಂ ತೆಂದಂ

ಕಂ॥ ಅಱಿಯಲಣಮಾಗದಂತಿರೆ
ಮಱಿಸಿ ನಿಯೋಗದೊಳೆ ರೂಪುಗರೆದಿರ್ದೊಡಮೇಂ
ತುಱುಗೊಳೆ ಮಾಣರೆ ಮಾಣರ್
ತಱುಸಂದೆಯ್ತಪ್ಪರೆಯ್ದೆ ತಮ್ಮಂ ತೋರ್ಪರ್ ೩೬

ವ॥ ಅದಱಿಂದಲ್ಲಿಯ ತುಱುವಂ ನಮ್ಮ ಬಲಮೆಲ್ಲಮನಟ್ಟಿಕೊಳಿಸಿ ಪೊಱದುಟ್ಟಿಯ್ತೂಂದರನಿಕ್ಕಿ ನಿಶ್ಚಿಂತಂ ಮಾಡಿರ್ಪಮೆಂದೊಡಿದಪ್ಪುದೆಂದಾ ಕಜ್ಜಮನೆಕೆಯ್ಕೊಂಡುಮಱುದೆವಸಂ ತನ್ನ ಸಮಸ್ತ ಸಾಧನಮಂ ವಿರಾಟಪುರದ ತುಱುಗೊಳಲಟ್ಟಿದೊಡಾ ನೆರವಿ ಪಯಣಂಬೋಗಿ ವಿರಾಟಪುರಮನೆಯ್ದಿ ತುಱುವಿನೆಳ್ಗೆಯೊಳೊಂದುಮಂ ಪೋಗಲೀಯದೆ ಪೊಲನೆಲ್ಲಮಂ ಬಳಸಿ ಕವಿದು ತುಱುವಂ ಕೈಕೊಳ್ವಾಗಳ್ ಗೋವರ್ ಕಂಡು

ಕಂ॥ ಇಂತೆಂಬುವೊಳವೆ ಕಣೆಗೊ
ಳ್ವಂತಪ್ಪ ಕಿರಾತಸೇನೆಯಲ್ಲಂಬುಧಿ ಪ
ರ್ಯಂತ ಧರೇಶನ ಚಾತು
ರ್ದಂತಬಲಂ ಮುತ್ತಿಕೊಂಡುದಾದೊಡಮೇನೋ ೩೭

ಉತ್ಸಾಹ॥

ಎಂದು ಮಸಗಿ ಬಿಲ್ಲನೊತ್ತಿಕೊಂಡು ಮುಳಿದು ಸಾ
ರ್ತಂದು ನಿಂದು ಮಾಣದೆಚ್ಚೊಡವರ ಬಿಲ್ಲಮೆ
ಯ್ತಂದು ಕುಣಿದು ಮಣಿಯದೆಚ್ಚೊಡಂಬು ಗಗನ ಭಾಗದೊಳ್
ದುಂದಮಾಗಿ ಪಾಱಿದವು ತಮಂಧಮಪ್ಪಿನಂ (?) ೩೮

ಕಂ॥ ನೆಱೆಗೊಂಡಂಬಿನ ಕೋಳಂ
ನೆಱೆಯೆ ಮನಂಗೊಂಡುಮಾರ್ಪುಱ್ ಸಮನಿಸಿತೆಂತು[ಂ]
ತುಱುಗೊಳ್ ಸಾವೆಮಗೆಂತುಂ
ತೋಱಿದ ತಪಃಫಲಮೊ ಪೇಱಿಮೆನುತಂ ಬಿರ್ದರ್ ೩೯

ಕಂ॥ ಅಱಿಕೆಯ ಬಲ್ಲಾಳಪ್ಪರೊ
ಳಿಱಿವುದು ದೊರೆಕೊಂಡುದಣ್ಮೆ ಸಾವೆಡೆಯುಂ ತಾಂ
ತುಱುಗೊಳ್ವೆಡೆಯೆಂದೆಡೆ ಪೋ
ಪೆಱದೇಂಗಳ ನಮ್ಮ ಸಯ್ಪು ಪೊಗಟಲಳುಂಬುಂ ೪೦

ವ॥ ಎಂದೆಂದು ಪೊ[ಕ್ಕೆ]ಚ್ಚು ಪಾಯ್ದು ನೆತ್ತಱು ಬಟಲ್ದು ಬಿರ್ದರಂತು ಗೋವರ ನೆರವಿಯಂ ಮಾರ್ಪಡೆಯರ್ ಕಂಡವರ್ ಗೋವರುಂ ತುಱುಲಾಳ್ಗಳುಂ ತಕ್ಕುದಂ ಬಗೆಯದೆ ಬೇಡರಂತೆ ತುಱುಗೊಳಲ್ ಬಂದ ನಾಮೆ ಗೋವನೆಂದೊಡೊರ್ವ ನೆಂದನಂತೇ ಕೆಂಬೆಯಾಳ್ದರ ಬೆಸದ ಪೊಲ್ಲೆಮೆ ನಮ್ಮದಲ್ಲಾಳ್ದನದೆಂದು ಪೊಕ್ಕು ಕಾದಿ ಡತ್ತರಂತು ಸಿರಿದು ಪೊತ್ತು ಕಾದಿ ಗೋವರಂ ತವೆ ಕೊಂದು ತುಱುವಂ ಕೈಕೊಂಡು ನಡೆವಮೆಂಬನ್ನೆಗಮೊರ್ವ ಗೋವಂ ಬರ್ದುಂಕಿ ಪೋಗಿ ಪುಯ್ಯಲಿಡುತಂ ಪೊಟಲಂ ಪೊಕ್ಕು ವಿರಾಟಂಗಿಂತೆಂದು ಬಿನ್ನಪಂಗೆಯ್ದಂ

ಕಂ॥ ಅಸದಳಮಾಗಿರೆ ಪೆರ್ವಡೆ
ಮಸಗಿ ನೆಲಂ ಮೂರಿವಿಟ್ಟ ತೆಱದೊಳ್ ನಾಲ್ಕುಂ
ದೆಸೆಯುಂ ಕವಿತಂದೀಗಳ್
ಬಿಸಸನದೊಳ್ ಕೊಂದು ಗೋವರಂ ತುಱುಗೊಂಡರ್ ೪೧

ವ॥ ಇಂತಪ್ಪುದಂ ನೀವಱಿವಿರೆನೆ ವಿರಾಟಂ ತ್ರಿಸ್ಥೂಳಂ ಮಸಂ ಪುರಕ್ಷೋಭ ಮಾಗಿರ್ದು ಸಮಸ್ತ ಸಾಧನಸಹಿತಂ ನಡೆಯೆ ಮೆಯ್ಗುರೆದಿರ್ದ ಪಾಂಡವರೊಂದೆಡೆಗೆವಂದು ನಾಮೇಗೆಯ್ವಮೆಂದಾಳೋಚಿಸುವಾಗಳರ್ಜುನನಿಂತೆಂದಂ
ಕಂ॥ ಏ ಪಡೆ ಮಾತಿದು ಕೌರವ

ಭೂಪತಿ ನಮ್ಮಿರವ ೀ[ನಾರಯಲ್]ೀನೆಗಟ್ಟಿ ತೆಱಂ
ಭೂಪಾಳರೆಲ್ಲರಪ್ಪಡೆ
ಗೋಪಾಳರನಿಂತು ಕೊಂದು ಕೊಳ್ವರೆ ತುಱುವಂ ೪೨

ವ॥ ಇದು ಪೆಱದುಲ್ಲು ನಮ್ಮಿರವನಾರಯ್ಯಲ್ ನೆಗಟ್ಟಿಂದಮಿದಕ್ಕೆ ಸೆರಗಂ ಬಗೆದು ತುಱುಗೊಳೆ ಮೆಯ್ದೆಗೆವುದು ತಕ್ಕುದಲ್ತೀಯೆರಡುಮಲ್ಲದೆಯುಮನಥಿಯ ದೆವಸಮುಂ ಪೋದುವು ನಾಮಿ ಪದದೊಳಡಂಗಿದೊಡಮಱಗೆಯ್ತಕ್ಕೆ ಕಡಂಗಿದೊಡಂ ನಮ್ಮಿಂದಂ ಕಷ್ಟರಿಲ್ಲೆಂಬ ಮಾತಂ ಧರ್ಮಜಂ ಮೆಚ್ಚಿ ನರನ ಕಜ್ಜಮನೆ ಕೆಯ್ಕೊಂಡು ಬೇಗಮೆರ್ದು ತಂತಮ್ಮಾಯುಧಂಗಳನ್ ಕೊಂಡು ನಡೆಗೊಂಡು ಪುಯ್ಯಲಿಗರೊಡನೆ ಪೊಱಮಟ್ಟು ವಿರಟನ ಪೆಱಗಂ ಬರೆ ವಿರಾಟಂ ತುಱುವಿನ ಕೋಳ್ವಯನೆಯ್ದಿ ಮಿತ್ತುವಿನ ಬಾಯ ನೆಯ್ದಿದಂತೆ ತಲ್ಲಱಸಿಯುಂ ಪೋಬಟಱಯಂ ತಗುಳ್ದೆಯ್ದಿದಾಗಳ್ ಬಲದ ಪಡಿಬಲದವರ್ ಕಂಡು ಮಗುಟ್ಟಿ ನಿಂದು ಕಾದೆ ವಿರಟನ ಬಲಂ ಪೇಸೇಱೊ ಸತ್ತುದಂ ಕಂಡು ಪೊಡರ್ಪುಗೆಟ್ಟುಗಿಯೆ ಪಾಂಡವರ್ ಕಂಡು ವಿರಾಟನಂ ಪೆಱಗಿಕ್ಕಿ ಮಾಱಾಂತರನಿಕ್ಕಿ ಕಾದುವಾಗಳುಱದ ಬಲಂಗಳುಂ ಗೋಟಱಂಡೆಗೊಂಡು ನಿಂದು ನೋಡಿ ಪಾರ್ಥನಂಬಿನ ಮಸಕಮುಮಂ ನಾಡಾಡಿಯಲ್ಲದೆಸಕಮುಮಂ ಕಂಡಿಂತೆಂಬರ್

ಕಂ॥ ಸುರನಿವನಸುರನಿವಂ ಖೇ
ಚರನಿವನಲ್ಲದೊಡೆ ಪಾಂಡುರಾಜನ ತನಯಂ
ೆರನಿವನಾಗಲೆವೇಱ್ದುದು
ಧುರದೊಳ್ ಪೆಱನಿಂತು ಕಾದನೆಂದರ್ ಪಲಬರ್ ೪೩

ಒಂದೆ ಸರಂ ತಿರುವಾಯಿಂ
ಬಂದರೆಬರನಿಕ್ಕಿದೊಡನೆ ರಿಪುಗಳೊಳೊರ್ವ೦
ಗೊಂದೆ ಸರಮಾಗೆ ನಡಯಿಸು
ವಂದಮನೊಡನೊಂದೆ ಸರದೊಳೆಲ್ಲಂ ಪೊಗಟ್ಟಿರ್ ೪೪

ಜಾಣ್ಚಿದುರನೊದವಿಸುತ್ತಿರೆ
ನಾಣ್ಚಲಮಂ ಪಡೆಯೆ ನೆಗಟ್ಟಿ ಗಂಡರನೆ ಕರಂ
ಪುಣ್ಚುವುವುಱ್ದವರಂ ಕಡೆ
ಗಣ್ಚುವುವಂ ಬಾಯಮಱವುಮಿಂತರ್ಜುನನಂ ೪೫

ಅಭಿನವಸಂಭವನಪ್ಪನ

ನುಭಯ ಭವ ಭ್ರಷ್ಟನಂ [ಮಿಗೆ] ಬಂಚಿಸಿಂ ಬಂ
ದಭಯನನಘಟನನಂಕದ
ಸುಭಟನನಾಯ್ದಱಿದು ಕೊಳ್ವ[ದ]ರ್ಜುನನ ಶರಂ ೪೫

ವ॥ ಅಂತರ್ಜುನನಂಬಂದು ಕೊಳೆ ಪೊಡರ್ಪುಳ್ಳರೆಲ್ಲಂ ನೋವರುಂ ಸಾವರುಮಾಗೆ ಭಯಮುಳ್ಳರೆಲ್ಲಮಳ್ಕಾಡು ವರುಮಾಗೆ ಕಾದಿ ಕೊಂಡ ತುಱುವಿ ನೊಳೊಂದು ಕರೆಗಱುವನಪ್ಪೊಡಂ ಪೋಗಲೀಯದೆ ಮಗುಟ್ಚಿ ವಿರಾಟನಂ ಕೈಕೊಳಲ್ವೇೞ್ದು ಮತ್ತಮಿದಿರ್ಚಿ ನಿಂದಯ್ವರುಮಂ ಕುರುಬಲದೊಳ್ ಕೆಲರಿಂತೆಂಬರ್

ಕಂ॥ ಈತಂ ಪಾರ್ಥಂ ನಂಬಿ
ದಾರ್ತಂ ಧರ್ಮಜನಗುರ್ವು ಪರ್ವಿದ ಗದೆನಿಡಿ
ದಾತಂ ಭೀಮಂ ಪೆಱಗಿ
ದಾರ್ತಂಗಳ್ ನೆಗೞ್ದ ನಕುಳ ಸಹದೇವರ್ಕಳ್ ೪೭

ಅಪ್ಪರ್ ಪಾಂಡವರಲ್ಲದ
ಗೊರ್ಪ್ಪದು ನಮ್ಮಿ ಸಮಸ್ತ ಬಲಮಂ ಗೆಲ್ವಂ
ತಪ್ಪಪರಾಕ್ರಮಮಿ ˚[ಲ್ಲಿಂ]˚
ತಪ್ಪುದನಾಳ್ದಂಗೆ ಪೋಗಿ ಪೇೞ್ದುದೆ ಕಜ್ಜಂ ೪೮

ವ॥ ಎಂದು ದಂಡನಾಯಕರುಂ ಪಲರ್ ನಾಯಕರುಮೊಂದೆಡೆಗೆ ವಂದೆಲ್ಲಿಯು ಮೊಳ್ಳಿದರಪ್ಪ ತುಱುಲಸಂದರ್ ತುಱುಗೊಳಲ್ ಪೋಗಿ ಸತ್ತರೆಂಬುದೊಂದಯಶಮಂ ಮಾಡದೆ ಪೋಪಂ ಬನ್ನಿಮೆಂದು ಮಗುೞ್ದು ಪಯಣಂಬೋದರಿತ್ತ ಪಾಂಡವರ್ ಗೆಲ್ವಂಗೊಂಡು ವಿರಟನಂ ಕೈಕೊಂಡು ತುಱುವಂ ಮುಂದೆಗೊಂಡು ಮಗುೞ್ವಾಗಳ್ ವಿರಾಟನುಮುತ್ತರನುಂ ಪಾಂಡವರಪ್ಪು ದನಱಿದು ತಮ್ಮ ರಥಂಗಳಿಂದಿೞಿದು ಬಂದೆಱಗಿ ಬಿನ್ನಪ[ಂ] ಮೆಯ್ಗರೆದಿರ್ಪುದೇನೆನ್ನಂ ಬೆಸಕೆಯ್ಸಿಕೊಂಡ ನೀಮಿಲ್ಲಿರ್ದರಸುಗೆಯ್ವುದೆಂದತಿ ಭಕ್ತಿಯಿಂ ಹಸ್ತ್ಯಶ್ವರಥಂಗಳನೇಱಿಸಿ ಮಹಾಮಹಿಮೆಯಿಂ ಪೊೞಲಂ ಪೊಕ್ಕು ತನ್ನ ಮಾಡಮಂ ಪೊೞಲುಮನವರ್ಗೊಪ್ಪಿಸಿ ಸರ್ವಪ್ರಿಯದಿಂ ವಿನಯಮನುಂಟುಮಾಡಿ ಬೆಸಕೆಯ್ಯುತ್ತಿರೆ ಪಾಂಡವರಲ್ಲಿರೆ ಮಹಾವಿಭೂತಿಯುಂ ಖ್ಯಾತಿಯುಂ ಪೆರ್ಚಿಶೌರ್ಯಮು ಮೌದಾರ್ಯಮುಂ ನೆಗೞೆ ಸುಖದಿನಿರ್ದರಂತಿರ್ದರುಮಂ ಕೌರವನ ಗೆಯ್ದಯೋಗಮುಮಂ ದ್ವಾರಾವತಿಯೊಳಿರ್ದ ನಾರಾಯಣನುಂ ಬಲದೇವನುಂ ಕೇಳ್ದು ಪಾಂಡವರ ನಲ್ಲಿರಿಸಲಾಗದೆಂದೊಳೋಚಿಸಿ ಸತ್ಯಕನನವರ ನೊಡಗೊಂಡು ಬಯೆಂದಟ್ಟಿದೊಡಾತಂ ಬಂದು ಪಾಂಡವರಂ ಕಂಡು ಪಲದೆವಸಂ ಕಂಡಱಿಯೆಮಾಗಿ ಕರಂ ನೆನೆವೆವು ಬರ್ಕೆಂದು

ನಿಮ್ಮಮಾನಂಗಳು[ಂ]ಮಯ್ದುನರ್ಕಳು ಬೞಿಯನಟ್ಟಿದರೆಂದತ್ಯಾಗ್ರಹಂಗೆಯ್ದು ವಿರಾಟಸಹಿತಮೆಲ್ಲರುಮನೊಡಗೊಂಡು ಪೋಗಿ ದ್ವಾರಾವತಿಯೊಳ್ ನಾರಾಯಣಂ ಮೊದಲಾಗೆ ಬಂಧುಗಳೆಲ್ಲರುಮಂ ಕಂಡು ನಿಶ್ಚಿಂತಮಿರ್ದರಂತಾ ಸ್ವಜನ ಸುಜನ ಸಂಪರ್ಕದಿಂ

ಕಂ॥ ಅತಿಶಯ ವಿಭವದಿನಮರಾ
ವತಿಯೊಳ್ ದಿವಿಜೇಂದ್ರನಿಪ್ಪ ತೆಱದಿಂ ದ್ವಾರಾ
ವತಿಯೊಳುಪೇಂದ್ರಂ ವಿಭವೋ
ನ್ನತನುಂ ಮಹಿನುತನುಮಾಗಿ ಸುಖದಿಂದಿರ್ದಂ ೪೯

ವ॥ ಅಂತಿರ್ಪಿನಮಲ್ಲಿಗೆ ಪಿರಿಯನೊರ್ವಂ ವಣಿಕ್ಕುಲಾಧಿಪತಿಯ ಬಹಿತ್ರಂಗಾಳಿಯ ವಶದಿಂ ಸಾರ್ತಂದೊಡೆ ಮಱುವಾರದೊಳ್ ಬಹಿತ್ರಮನಿರಿಸಿ ವಣಿಕ್ಪತಿಗಳ್ ಪೊೞಲಂ ಪೊಕ್ಕು ತಮ್ಮ ತಂದ ಸಾರವಸ್ತುಗಳಂ ನಾರಾಯಣಂಗೊಪ್ಪಿಸಿದೊಡಾ ತನುಮವರ್ಗೆ ದಾರಿದ್ರಮೋಕ್ಷಮಪ್ಪಂತು ಕೊಟ್ಟಡೆ ಕೆಲವು ದೆವಸಮಿರ್ದುಮಲ್ಲಿಂದಂ ಪಯಣಂ ಬಂದು ಮಗಧವಿಷಯಮನೆಯ್ದಿ ರಾಜಗ್ರಹಮಂ ಪೊಕ್ಕು ಈ ವಸ್ತುಗಳ್ಗಿಲ್ಲಿ ಪೆಱರರುಂಗ್ರಾಹಕರಿಲ್ಲೆಂದು ಜರಾಸಂಧಚಕ್ರವರ್ತಿಗೆ ತಮ್ಮ ತಂದ ರತ್ನಂಗಳಂ ತೋಱಿದಾಗಳ್ ನೋಡಿ ಚೋದ್ಯಮೆಂದು ನಡೆಯುಂ ಬೇಗದಿನಿಂತೆಂದಂ

ಕಂ॥ ಇಂತಪ್ಪ ರತ್ನಜಾತಿಗೆ
ಳೆಂತುಮಗೋಚರದೊಳಿಲ್ಲದಿರವದಱಿಂ ನೀ
ಮೆಂತೆಯ್ದಿದಿರೆಂ ೧[ತು ತಂದಿ]೧
ರೆಂತಿವು ದೊರೆಕೊಂಡು ೨[ವೆಂತು ಬಂ]೨ದಿರೊ ಪೇ ೩[ೞಿಂ]೩ ೫೦

ವ॥ ಎಂದೊಡಾಮಪ್ಪಡೆ ವಣಿಗ್ವಂಶಜರ್ಕಳುಮರ್ಥೋಪಾರ್ಜನಾ ನಿಮಿತ್ತದಿಂ ಜಲಯಾತ್ರೆಯೊಳ್ ಪೋಗಿ ಚೀನ ಮಹಾಚೀನಂಗಳಂ ಪೊಕ್ಕು ಚಕ್ರವರ್ತಿಗೆ ಯೋಗ್ಯಮಪ್ಪ ಪಟ್ಟಿಸ ಭಂಡಾರಮಂ ಕೊಂಡು ಮಗುಟ್ದು ಬಪ್ಪಾಗಳೆಮ್ಮ ಬಹಿತ್ರಂ ಸಮುದ್ರದೊಳಗೆ ನಾಲ್ವತ್ತೆಣ್ಗಾವುದದಿಂ ದೇವನಿರ್ಮಿತಮಾಗಿರ್ದ ದ್ವಾರಾವತಿಯೆಂಬ ಪೊೞಲಂ ಪೊಕ್ಕದಂ ದೇವಲೋಕಮೆ ಗೆತ್ತುಮದಱ ನಡುವಣ ಕರುಮಾಡಮಂ ರಿತುವಿಮಾನಮೆಗೆತ್ತಲ್ಲಿಗಧಿಪತಿಯಪ್ಪ ನಾರಾಯಣನಂ ದೇವೇಂದ್ರನೆ ಗೆತ್ತು ಪೋಗಿ ಕಂಡೆಮ್ಮ ತಂದಸಾರವಸ್ತುಗಳೀತಂಗೆ ತಕ್ಕುವೆಂದಾತಂಗಮೋಲಗಿಸಿದೊಡಾತನವಂ ಕೈಕೊಂಡು ಮಱುದೆವಸಂ ತನ್ನ ಕೊಂಡವಕ್ಕಂ ನೂರ್ಮಡಿಯಕ್ಕುಮೆಂದಿವನಿತ್ತೊಡಲ್ಲಿ ಕೆಲವು ದೆವಸಮರ್ಥಿ ಯೊಳಿರ್ದಲ್ಲಿಂದಮಿತ್ತ ಬಂದೆವು

ಕಂ॥ ಜಲನಿಧಿಭಂಡಾರಮವಂ
ಗಲಂಘ್ಯಮಪ್ಪೆಡೆಯಂಪ ಪಡೆಯುಂಗಾಣಂ

ಬೆಲೆ ಕಲಕೆಗುಡುವದನಮಾ
ಗಿರ್ಪ ವಸ್ತುಗಣೆಣೆಯೊಳವೇ (?) ೫೧

ವ॥ ಎನೆ ಕೇಳ್ದಕ್ಕುಂ ಸಾಲ್ಗು ಮಾತನಾಕಾರ(?)ಕುಲ [ವಾ]ತನಾರ ಮಗನೆನೆ ಹರಿವಂಶದ ಸಮುದ್ರವಿಜಯಾ ದಿಗಳೊಂಬದಿಂಬರಿಂ ಕಿಱಿಯ ಮಸುದೇವನೆಂಬೊನಾತನ ಮಗನೊರ್ವಂ ಬಲದೇವನೆಂಬೊನಚಿಂತ್ಯ ಬಲಪರಾಕ್ರಮನಾತನಿಂ ಕಿಱಿಯ ನಾರಾಯಣನೆಂಬಂ ವಾಸುದೇವ ಸಾಹಸದೊಳ್ ನೆಗಟ್ದು ಪಾಂಡವರ್ ಮೊದಲಾಗನೇಕ ರಜಕುಮಾರ ಪರಿವೇಷ್ಟಿತನಾಗಿ ರಾಜ್ಯಂಗೆಯ್ಯುತ್ತಿರ್ದನೆಂದಾಗಳ್

ಕಂ॥ ಎಂತೆಂತೋ ನೀಮೆಂಬುದು
ಭ್ರಾಂತಾಗಿರ್ದಪುದು ಯಾದವರ್ ಕಿಚ್ಚಂಪಾ
ಯ್ದಂತಕಮುಖಮೆಯ್ದಿದ ಮಾ
ತಿಂತಾಯ್ತೇ ಜಲಧಿಯೊಳಗೆ ನೆಲಸಿರ್ದಪರೇ ೫೨

ವ॥ ಎನೆ ದೇವ ತಪ್ಪಿಲ್ಲೆಂದೊಡರಸಂ ಮುನಿದು

ಕಂ॥ ಈ ಮಹಿಯೊಳ್ ತಲೆದೋಱದೆ
ಭೀಮ ಮಹಾಂಬುಧಿಯೊಳುಟಿುದಡಾನಲ್ಲಿಗೆವಂ
ದೇಮಾತದಜೂಳಗಣ ಬಡ
ವಾಮುಖಮಂ ತಮಗೆ ಯಮಮುಖಂ ಮಾಡದಿರೆಂ

ವ॥ ಎಂದು ಗರ್ಜಿಸಿ ನುಡಿವರಿತ್ತ ರತ್ನಂಗಳ್ಗೆ ತಕ್ಕ ಬೆಲೆಯಂ ಕೊಟ್ಟು ಕಳುಸಿ ತನಗಾಗಿ ನೆಗಟ್ವ ಪಲರುಂ ಮಂಡಳಿಕರ್ಗಂ ಕುಟುಂಬ ನಿಕರಕ್ಕಮಾಟವಿಕರ ಬಲಕ್ಕಂಬಟಿಯಟ್ಟಿ ಬರಿಸಿ ಸನ್ನಣಂಗಳನೋಸರಿಸಿ ನಿಜತಂತ್ರಕೆಲ್ಲಂ ಪೇಟ್ದಿಲ್ಲಿ ಯುದ್ಧಮಂ ಸಮಕಟ್ಟಿ ಸಂಗ್ರಾಮಭೇರಿಯಂ ಪೊಯಿಸಿ ಪೊಱಮಟ್ವಿರ್ದುದಂ ವಾಚಸ್ಪತಿಯೆಂಬ ಮಂತ್ರಿ ಕಂಡೀಕಜ್ಜಮನಾರಾಳೋಚಿಸಿನೆಗಟನೆಂದುಮಱಯೆನೆನಗೇಕಮ್ಮಂಗಿರಲಾಗದಿದ ನಾರಯ್ಯವೇಟ್ಬುದೆಂದರಸನಲ್ಲಿಗೆವಂದೇಕಾಂತಮಂ ದಯೆಗೆಯ್ಯಿ ಮೆಂದಾಗಳಂತೆಗೆಯ್ವೆಮೆಂದು ಮತಿವಂತನನೆಂಬ ಪೆರ್ಗಡೆಯಂ ಬರಿಸಿ ಮಂತಣಮಿರ್ದಲ್ಲಿ ವಾಚಸ್ಪತಿಯೆಂಗುಂಪೇಟಿು ನೀಮಾಗಳ್ ನಾರಾಯಣನೊಳೇನೆಂಬುದಂ ಕೇಳ್ದು ಮೇವೇಟಲ್ ಬಗೆದಿರಾತಂಗಂ ನಮಗಮಾರ್ಗೆ ದೈವಬಲಮುಂಟೆಂಬುದಂ ಮುನ್ನಮಾ ರಯ್ದುದೆಂದಡೆ ನೀನೆ ಪೇಟುಂದೊಡಾತನಿಂತೆಂದಂ

ಕಂ॥ ಓರ್ವನೆ ಕಂಸನನಿಕ್ಕಿದ
ಗುರ್ವಂ ನೀನಟ್ಟಿದಮಿತ ಸಾಧನಮೆಂದೋ
ಗರ್ವದೆ ಗೆಲ್ದೊಂದಳವುಂ
ಪೂರ್ವಾರ್ಜಿತ ಪುಣ್ಯದಳವನೇಂ ಸೂಚಿಸವೇ ೫೪

ದೇವೇಂದ್ರಸನ್ನಿಭಂ ವಸು
ದೇವಂ ತಾಂ ತಂದೆ ನೆಗಟ್ದಿ ಬಲದೇವಂ ಮ
ತ್ತಾ ವಿಭುವಿಂಗಣ್ಣಂ [ತಾಂ]
ದೇವರ ದೇವಂಗೆ ದೇವನೆಂಬುದ ಬಗೆಯಾ ೫೫

ಇಂಬಿನೊಳಿರಲ್ಕೆ ಪೆಱದೆಡೆ
ಯಿಂಬಲ್ಲೆಂದಿಂದ್ರನೊಂದು ಪುರಮಂ ತಾನಂ
ದಂಬುಧಿಯೊಳ್ ಸಮೆದಿರಿಸಿದು
ದಂ ಬಗೆವುದು ಹರಿಯ ಪಿರಿಯ ಸುಕೃತೋದಯಮಂ ೫೬

ಗಂಡುಗುಣದಗ್ಗಳಿಕ್ಕೆಯ
ಪಾಂಡವರೇಕೈಕ ವೀರರಯ್ವ [ರ]ನಣ್ಪಂ
ಕೊಂಡಾಡಿ ನಯದೆ ಚಿತ್ತಂ
ಗೊಂಡೋಲಗಿಪುದುವೆ ದೈವಬಲಮಂ ಪೇಟ್ಟುಂ ೫೭

ಕರಮರಿಯರಪ್ಪ ವಿದ್ಯಾ
ಧರರನಡುರ್ತೆಯ್ದಿ ಜಡಿದು ನುಡಿದಾಹವದೊಳ್
ನೆರೆದೆಟಿಱದುಕೊಂಡ ಕನ್ಯಾ
ಹರಣಂಗಳ್ ಪುಣ್ಯದಳವನೇಂ ಪ್ರಕಟಿಸವೇ ೫೮

ವ॥ ಇಂತು ದೈವಬಲಮಾತಂಗುಂಟಾಗಿ ತೋಱದಪ್ಪುದಾವ ಬಲದಿಂ ದೈವಬಲಮೆ ಬಲಮಾಗಿ ನೆಗಟ್ದಿದೆಂದು ನುಡಿದೆತ್ತಾನುಮಾ ನುಡಿಗೇವಯ್ಸುಗುಮೆಂದುಂ [ಯಕು] ತಿಯುಮಂ ಬಗೆದು ನೋಡೆತುಟಿಲಸಂದಂಗೆ ಕಿಱದೊಂದು ನೀರಂ ಪೊಕ್ಕಂಗೆ ಮುಳಿಯಲಾಗೆಂದೊಡೆ ಸಮುದ್ರದೊಳಗಿರ್ದೊಂಗೆಂತು ಮುಳಿಯಲಪ್ಪುದೆಂದು ಗೆಲ್ಲದನಯಮಂ ತೋಱ ನುಡಿಯೆ ನೀನೇನನೆಂದಪೆಯೆಂದು ಮತಿವಂತನಂ ಬೆಸಗೊಂಡೊಡಾತನಿಂತೆಂದಂ

ಕಂ॥ ವಿಕ್ರಂತಮುಱಿದು ಧರಣೀ
ಚಕ್ರಂ ಬೆಸಕೆಯ್ದುವಲ್ಲದೀತನ ಮನೆಯೊಳ್
ಚಕ್ರಂ ಪುಟ್ಟಿದುದೆಂದೊಡ
ತಿಕ್ರಮಿಸಲ್ಕೀಗಳಾರ್ಗೆ ತೀರ್ಗುಮೆ ಮರುಳೇ ೫೯

ನಾಡಾಡಿಯಲ್ತು ಪವಣೆಸೆ
ವೇಡೀತನ ಪಡೆಯನೊಯ್ಯನಿಂ ಚಿಂತಿಸಿ ನೀಂ
ನೋಡ ಧರಾತಳಮನಿತುಂ
ಬೀಡುವಿಡಲ್ ನೆಱಯವಿಱಯಲಾವಂ ನೆಱವೊಂ ೬೦

ವ॥ ಇಂತಪ್ಪ ಬಲ್ಲಾ [ಳ್ತನ] ವನಾತನಱದುಮುಱದೆ

ಕಂ॥ ಕೊಂದಂ ನೃಪನಳಿಯನನಾ
ಟಂದ ಬಱಕನುಜತನುಜವರ್ಗಮನದನೇ
ನೆಂದು ಕಡೆಗಣಿಪರಾಯತಿ
ಕುಂದೆ ಕರಂ ಬನ್ನಮೊಂದೆ ಬಾೞ್ವುದೆ ಗಂಡರ್ ೬೧

ವ॥ ಈತನ ಬಲ್ಲಾಳ್ತನದ ಪೆಂಪಿನಿವಿರಿದು ಬನ್ನದ್ ಪೆಂಪಿನಿವಿರಿದು ಪೆರ್ಗಡೆ ಲೊರ್ಪಡೆ ಪ್ರಾಣಕ್ಕೆ ಕೊರ್ಪುದೊ ನಾಣ್ಗೆ ಕೊರ್ಪುದೆಂದಾಗಳ್ ಜರಾಸಂಧನುಮದನೆಮೆಚ್ಚಿ ಸಮರೋದ್ಯೋಗಕಾರ್ಯಮನೆತ್ತಿಕೊಂಡಾಯಡೆಯಿಂದಮೆರ್ದುಪೋಗಿ ನಯದೊಳಂ ಭಯದೊಳಂ ತನಗಪ್ಪ ನೆರವಿಯೆಲ್ಲಮಂ ಬರಿಸೆಕೊಂಡಂತು ಮೂವತ್ತುಮೂಱಕ್ಷೋಹಿಣೀ ಬಲಂ ತನಗೆ ನಿಜಬಲಮಾಗೆ ಮನಂಪೆರ್ಚಿ ಮಸಗಿ ನಡೆವಾಗಳ್

ಪೃಥ್ವಿ॥
ತರುಪ್ರಕರ [ವಾ]ಳನಂ ಘನತರಾಯುಧಜ್ವಾಳನಂ
ಮರುತ್ಪಥ ಮಳೀಮಸಂ ಜನಿತ ಸರ್ವದಿಕಾಮನಂ
ಕರೀಂದ್ರಚಯಮಾದನಂ ಕನಕ ಕುಂಭೀ ನಿಭೇಧದನಂ
ಧರಿತ್ರಿತಳ ಗರ್ಜನಂ ದಿನಪರಶ್ಮಿವೈ ಸಜ್ಜನಂ (?) ೬೨

ವ॥ ಇಂತಾದುತ್ಪಾತಂಗಳಂ ಬಗೆಯದೆ ಪರಿಭವಘಾತಂಗಳಂ ಬಗೆದು ಪಯಣಂ ಬೋಗಿ ಹಸ್ತಿನಪುರದೊಳ್ ಪಾಂಡ ವರ್ಗೆ ಬಿಗಿರ್ತುಱಿಯುತ್ತಿರ್ದ ದುರಿಯೋಧನಂ ಜರಾಸಂಧನ ಬಂದ

ಕಾರ್ಯಸ್ಥಿತಿಯನಱಿದು ಉಂತೆಯಾಡುವಗೆಱಯಪನಾದಂತೆ ಮಸಗಿಪನ್ನೊಂದಕ್ಷೋ[ಹಿ]ಣಿ ಬಲಂಬೆರೆಸುಮಿದಿರಂ ನಡೆದು ಪೋಗಿ ಕಂಡು ದೇವ ನೀಂಮುಳಿದೆಯ್ತುಂಪ್ಪಂತೆವರೇವಿರಿಯರಾ ಯಾದವರ್ಗನ್ ಪಾಂಡವರ್ಗಮಾನೆ ಸಾಲ್ವೆನೆಂದೊಡಂತೆ ನಿನ್ನಳವಾದೊರೆಯಾದೊಡಮೆನ್ನ ಮುಳಿಸಿಂತಲ್ಲದಡಂಗದೆಂದಾತಂಗ ತಿಪ್ರಿಯಂ ಗೆಯ್ಯ ಸಂತೋಷಂಬಟ್ಟು ಕೊಡೆ ಬಿಟ್ಟಿರ್ದಂ ಮತ್ತಮಂತೆ ಕೊಡಿದ ಸಮ [ವಾ]ಯಿಗಿಗಳಪ್ಪರಸುಗಳುಂ ಮ್ಲೇಚ್ಛರಾಜ ರುಂ ಮುನ್ನೆ ವಸುದೇವನೊಳಂ ನಾರಾಯಣನೊಳಮಘ ಪಟ್ಟು ಮುಟ್ಟುಗೆಟ್ಟು ಚಾಱುತ್ತಿರ್ದ ವಿದ್ಯಾಧರರೆಲ್ಲಂ ಬಂದು ಕೊಡಿ ಕೊಂಡಂತಲ್ಲಿ ನೆರೆಯೆ ಪೆರ್ವಡೆ ಪಯಣಂಬೋಪಾಗಳೆಲೆಯೆಲಿದೆ ಬಿಂಜಮೆ ನಡೆವಂತೆ ಧನುರ್ಬಲಂ ನಡೆಯೆತಮದ ತೊಱಯುಕ್ಕುವಂತೆಯೆಣೆಬಲಂ ನಡೆಯ ಸಮುದ್ರದ ತೆರೆಗಳಂತೆ ತರತರದೋಳೆವಟ್ಟು ರಥ[ಂ] ನಡೆಯೆ ಚತುರ್ವಿಧ ದೇವನಿಕಾಯ ವಿಮಾನ ಪಙ್ತಿಗಳೆಲ್ಲವೊಡನೆ ನಡೆವಂತೆ ರಥಸಮೊಹಂ ನಡೆಯಲೀಕದ ಬೆಟ್ಟುಗಳೆಲ್ಲವೊಡನೆ ನಡೆವಂತೆ ಪಡೆ ನಡೆಯಪಡೆಯ ಮುದಾದ ಬೆಟ್ಟುಂ ಘಟ್ಟಂಗಳ್ ಸಮಭೊಮಿಯಾದವು ಪೆಱಗಣವರ್ಗಾ ಸಮಭಮಿಯೆಲ್ಲಂ ದರಿವಿರ್ದು ಪರಿವಿರ್ದು ಪಳ್ಳಮುಂ ಕೊಳ್ಳು ಮಾದೊಡೆಲ್ಲಂ ಬತ್ತಿದ ಮಹಾಸಮ್ಯೆದ್ರದಂತೆ ನೇರಿ [ತ್ರಗುಱಿ]ದು ಮಳಲುನೆಲನಾಯ್ತುಲ್ಲಿಂ ಪೆಱಗಣ ನೆರವಿಗಾಮಣಲೆಲ್ಲಂ ಪುಡಿವಿಟ್ಟು ಪಾಱುತಂತು ಪುಲ್ಲಕಲ್ಲ ನೀರ ಮರುಗಳನೇವೇಟಱಲುವೇಟ್ಟುದಂತರಿಕ್ಷಕ್ಕೆ ನೆಗೆದ ಪಕ್ಷಿಜಾತಿಗಳೆಲ್ಲಮಾ ಪಡೆಯ ಕಡೆಗಾಣದೆ ಮಗುಟ್ದಿ ಪಟಿಯಿಗೆಗಳೊಳಮಾಯುಧಾಗ್ರಂಗಳೊಳಂ ಪಾಯ್ದೊಡನೆ ಪೋದವಿಂತು ನೆಲಂ ಮೊರಿವಿಟ್ಟಂತೆ ಪೋದ ಡೆಸೆಯ ನಾಡುಂ ಕಾಡುಗುಱಯದೆ ಪಯಣಂಬೋಗಿ ಕುರುಕ್ಷೇತ್ರಮನೆಯ್ದುಬಿಟ್ಟಿರ್ದಾ ನೆಲಂ ಕಾಳೆಗಕ್ಕಿಂಬಾಗಿರ್ದುದೆಂದು ಬಗೆಯುತ್ತಿರ್ಪಿನಮಲ್ಲಿಗೆ ನಾರದನಾಕಾಶದಿನಿಱತರೆ

ಕಂ॥ ಶಾರದ ನೀರದದೊಳ್ ಮಱ
ಸಾರೆ ತನುಚ್ಛವಿ [ಪಡುವಣ] ದಿಂದಿಟಱತಪ್ಪಾ
ಕಾರದ ನಾರದನಂದನು
ನಾರದನಭಿವರ್ಣಿಸಲ್ಕೆ ಬಲ್ಲರ್ ಜಗಮೊಳ್ ೬೩

ವ॥ ಎಂಬಂತಿರೆ ತೊಳಗಿ ಬೆಳಗಿ ಧರೆಗಿಱತಂದು ಬಂದು ಜರಾಸಂಧಚಕ್ರವರ್ತಿಯಂ ಕಂಡಾಗಳೇಱಲಿಕ್ಕಿ ಕುಳ್ಳಿ ದೊರನೊಳ್ಳಿತು ಪ್ರಸ್ಥಾನದೊಳಾದಿನಾರಾಯಣನಲ್ಲಿಗೆ ಬೇಗಂ ಪೋಗಿ ನೇಮಿಂತೆನ್ನಿಂ

ಶಿಖರಿಣಿ॥

ಜರಾಸಂಧಂ ಬಂದಂ ಮುಳಿದ ಜವನೆಯ್ತುಪ್ಪ ತೆಱದಿಂ
ಕುರುಕ್ಷೇತ್ರಂ ಸೊತ್ರಂಬಿಡಿದ ಸಮರಿಟ್ಟಂದೆದ್ ಕಳಂ
[ಧರಕ್ಕೊಳ್ಳಿತ್ರೆಂದೆತ್ತಿ] ಱಯಲಿದಿರಂ ಬಂದನನಿಸಲ್

ಬರ ೞ[ಲ್ವೇ]ೞಟಿಃಂ ಪೇಟಿಃಂ ೫[ಕು]೫ಸಿದು ಬದುಕಲ್ಕಾ ೬[ಗ]೬ಮನುಜು ೬೪

ವII ಎಂದ ಮಾತಂ ಕೇಳ್ದು ನೀಮಿಂತೆನೆ ಮಾಣ್ಣ ಗಂಡನಲ್ಲೆನೆಂದಾಗಳೆ ನಭಸ್ಥಳಕ್ಕಿಗೆದು ಮಹಾಯುದ್ಧ್ಮ್ರಂ ಕಾಣಲ್ಪಡೆದ ರಾಗದೊಳ್ ಪವನವೇಗದೊಳ್ಪೋಗಿ ದ್ವಾರವತಿಯನೆಯ್ದಿ ಕೈಷ್ಣರಾಜೇಂದ್ರನಂ ಕಂಡೊಡಾತನತಿಪ್ರಿಯದಿನೇಱಲಿಕ್ಕಿ ಕುಳ್ಳಿರ್ದೊನನೇನುಂ ಸ್ತ್ರೀರತ್ನಮಿಳ್ಳೆಡೆಯನಱಿದು ಬಂದೊಡೆ ಪೇಟಿಮೆನೆ ನಾರದನಿಂತೆಂದಂ

ಕಂII ವನಿತಾರತ್ನ್ಗಳವೇಂ
ನಿನಗಱಿಯವೆ ಮೂಱು ಲೋಕದಿಂ ಪೊಗಱಿಸುತಿ
[ಪರ್ಣನಂತು] ವೀರತ್ರಿಯಂ
ನಿನಗೊಲ್ವಂತಾಗಿ ಮಾಡಿ ಕೊಡಲ್ ಬಂದೆಂ ೬೫

ವII ಎನೆ ರಾಗಿಸಿ ಪೇಟಿಮದಾವುಡೆನೆ ಜರಾಸಂಧಂ ನಿನ್ನಿರವಂ ಕೇಳಿ ಮುಳಿದು ಪಯಣಂಬಂದು ಕುರುಕ್ಷೇತ್ರದುಳ್ ಬಿಟ್ಟಿರ್ದನ್ನಂ ನೀಮುಂ ಪೋಗಿ ನಾರಾಯಣಂ ಗಿಂತೆಂಬುದು ಜರಾಸನ್ಧನ್ ಮುಳಿದು ಕುರುಕ್ಷೇತ್ರಂ ತ್ನಗಮೆನಗಂಕದ ಕ:ಅನಣ್ಮುವಡೆ ಬಕ್ಕೆಯಣ್ಮದೊಡೆಲ್ಲಿ ಪೊಕ್ಕಡಂ ತ್ಲೆಯಂ ಕೊಳ್ವೆನೆಂದಟ್ಟಿದ ನಿನ್ನಪ್ಪಡಂ ನೀಮಱುವಿರೆಂ ದೊಡಪ್ಪುದಿನ್ನಪ್ಪುದನಾವಱುವೆಂ ನೀಮೆನ್ನ ವೀರಶ್ರೀಯ ಮದುವೆಯ ನಾಕಾಶದೊಳಿರ್ದು ನೋಡುತ್ತಿರಿಮೆಂದೊಡಂತೆಗೆಯ್ವೆನೆಂದು ನಾರದಂ ಪೋದ ಬಟಿಯಮಾ ಪಡೆಮಾತಂ ಬಲದೇವಂಗಱಿಪಿದೊಡಾತಂ ಬಾ ನಾಮಾ ಮಾತಂ ಸಮುದ್ರವಿಜಯಂಗಱಿಪಿ ನೆಗಟ್ವಿ ಮಲ್ಲದೆ ನೆಗಟ್ವಿಂದು ನಮ್ಮ್ ವಿನಯಕ್ಕ ದೋಷಮೆಂದೊಡಕ್ಕುಮದುವಂ ಕೇಳ್ದಡೇನೆಂದ ಲ್ಲಿಗೆ ಪೋಗಿ ಸಮುದ್ರವಿಜಯರುಂ ಪಾಡವರುಮುಗ್ರಸೇನಾದಿ ರಾಜಪುತ್ರರುಮಂ ಬರಿಸಿ ತನ್ನಲ್ಲಿಗೆ ಜರಾಸಂಧನಟ್ಟಿದ ಪಡೆಮಾಱಂ ಪೇಟ್ದಿದಕ್ಕೆ ನಿಮ್ಮಡಿಯೇನೆಂದಪಿರೆನೆ ಸಮುದ್ರವಿಜಯ ಮಹಾರಾಜನಿಂತೆಂದಂ

ಕಂII ಬಲದೇವನೀತ ನೀನುಂ
ವಿಳಸತ್ ಶ್ರೀವಾಸುದೇವ ಪದವಿಯೊಳೊದಿ
ದೋರ್ಲದೀ ಮೂಱುಂ ಖಂಡದ
ನೆಲನಂ ಸುಖಡಾಳ್ದು ಚಕ್ರವರ್ತಿಯೆಯಪ್ಪೈ ೬೬

ವII ಎಂಬಾಗಮುಂ ತಪ್ಪಲಾಗಂತಪ್ಪಭೈ ದಯಕ್ಕಿದು ಕಾಲಮೆಂದೊಡುಂತೆಕುಣಿವಂಗೆ ಪಱಃವಡೆದಂತೆ ಹರಿ ರಾಗೋದ್ಯದಿಂ ಪೊಱಮಟ್ವಾಗಳವಂಗೆ ನಿಮ್ಮಡಿವೇಡಾಮೆಸಾಲ್ವೆಮಂದ ಪಾಂಡವರ ಮಾತಂ ಮೆಚ್ಚಿ ನಿಮ್ಮಳವಾದೊರಂತೆ ದಲಮಾ ದೊಡಮೆನೆಗೆ ಮಾಣಲಾಗದೆಂದು ಮತ್ತಂ ಸಮುದ್ರವಿಜಯಮಹಾರಾಜಂಗೆ ಕೆಯ್ಯಂಮುಗಿದಿಂತೆಂದಂ

ಕಂ॥ ನೇಮಿಶ್ವರನುಂ ತಿಜ್ರಗ
ತ್ಸ್ವಾಮಿಯನೋಲಗಿಸುರ್ಪುದೀ ಪುರವರಮಂ
ನೀಮಭಿರಕ್ಷಿಪುದಿನಿತಂ
ಸ್ವಾಮಿ ದ ಯಂಗೆಯ್ವುದೆಂದು ಬಾಗಿದೊಡಾಗಳ್ ೬೭

ವ॥ ನಿಮಗೆ ಸಧ್ಯಮಪ್ಪ ಕಾರ್ಯಮನಱಿದಿರ್ದೆಮಿದನೀಕೆ ಮಾರ್ಕೊಳ್ವಮಂತೆಗೆಯ್ವೆಮೆನೆ ಪ್ರಸಾದಮೆಂದು ಬಂದು ಕರುಮಾಡಡೊಳಿರ್ದಾಗಳ್ ಪ್ರಯಾಣಭೇರಿಯಂ ಪೊಯ್ಸಿದಾಗಳೆಲ್ಲರುಂ ತಂತಮ್ಮಾಯುಧಂಗಳುಮಂ ವಾಹನಂಗಳುಮಂಸನ್ನ ಣಂಗಳುಮನಿಂಬುಮಾಡಿ ನಡೆವ ಸಾಮಗ್ರಿಯೊಳಿರ್ದರ್ ನಾರಾಯಣನುಂ ವಿದ್ಯಾಧರರೊಳಂ ಭೂಮಿಗೋಚರರೊಳಂ ತನಗಪ್ಪ ನೆರವಿಗೆಲ್ಲಂ ಬಱಿಯಟ್ಟಿ ಬರಿಸಿ ಶುಭದಿನ ದೊಳ್ ಸೇನೆಯುಮಂ ಪರಕೆಯುಮಂನಾಂತು ಪಟ್ಟವರ್ಧನಮನೇಱಿ ಶುಭಶಕುನಂಗಳಾಗ ನಾನಾವಿಧ ತೂರ್ಯರವಂಗೆಳಸೆಯೆ ಪಟಿಯಿಗೆಗಳ್ ಮಿಳಿರೆ ಹಿಮವಂತ ಶಿಖರಿ ಸರೋವರದಿಂ ಪೊಱಮಟ್ಟ ಗಂಗಾಪ್ರವಾಹದಂತೆ ಪೊಟಲಿಂ ಪೊಱಮಟ್ಟು ಕಿಱಿದಂತರ ದೊಳ್ ಬೀಡಂ ಬಿಟ್ಟಿರ್ದು ಕಳಿಪುತಂ ಬಂದ ಸಮುದ್ರ ವಿಜಯಾದಿಗಳುಮಂ ಸ್ತ್ರೀಜನ ಮುಮಂ ಮಗುಟಿ ಮಱುದೆವಸಂ ಪಡೆ ನಡೆಯುವೆಡೆಯೊಳೋಜೆಯಿಂ ಸಮಕಟ್ಟಿ ನಿಚ್ಚವಯಣಂಬೋಗಿ ಕುರುಭೂಮಿಯನೆಯ್ದಿ ಜರಾಸಂಧನ ಬೀಡಿಂಗೈದುಯೋಜನ ದೊಳ್ ಬಿಟ್ಟಿರ್ದನಂತು ಹರಿ ಬಂದು ಬಿಟ್ಟಿದಂ ಜರಾಸಂಧಂ ಕೇಳ್ದು ಮತಿವಂತನು ಮನಾಗತಮತಿಯುಮೆಂಬ ಪೆರ್ಗಡೆಗಳಂ ಕರೆದು ನೀಮುಂ ಹರಿಯಲ್ಲಿಗೆವೋಗಿ ನಿನಗೆ ಜರಾಸಂಧಂ ಕರುಣಿಸುವಂತು ಸ್ವಾಮಿ ಕೊಲ್ಲದಿರು ಬಾಟ್ದಿಲೆವಂದೆನೆಂದು ಕಾಣೆಂಬುದಂ ನುಡಿದು ಜಡಿದು ಪೇಟ್ದು ಬನ್ನಿಮೆಂದಟ್ಟಿದೊಡವರ್ ಬಂದು ನಾರಾಯಣನಂ ಕಂಡೊ ಡೇಱಲಿಕ್ಕಿ ಕುಳ್ಳಿರ್ದು ಜರಾಸಂಧ ಚಕ್ರವರ್ತಿ ನಿಮಗಿಂತೆಂದು ಬೆಸಸಿಯಟ್ಟಿದೊಂ

ಚಂ॥ ಅಱಿಯದೆ ಮುನ್ನಗೆಯ್ದ ಕಡುದೋಷದಳುರ್ಕೆಗೆ ಬೆಚ್ಚಿ ಬಂದೆನೆಂ
ದಱಿಯಮೆಗಕ್ಕಟೆಂದು ಕರುಣಿಪ್ಪುದು ಕಾವುದು ನೀನೆ ಕಾಯೆ ಮೆ
ಯ್ಯಱಿಯದೆ ಬರ್ದೆನೆಂತು ಕಡುದೋಷದಿನೆಯ್ದೆ ರಸಾತಳದತ್ತ ಪೊಕ್ಕಡಂ
ನೆಱಿವೆನೆ ಬಟಿಲೆಂದೆಱಿಪುದೊಳ್ಳಿತು ಸಾವುದುಮೆಂತುಮೊಳ್ಳಿತೇ ೬೮

ವ॥ ಎಂದಟ್ಟಿದನಿದಾತನ ಬೆಸಸಿದ ಮಾತಾಮುಮೆಮ್ಮಱಿವ ಕಜ್ಜಮಂ ಪೇಱಿವೇಟಿ

ಕಂ॥ ಎಱಿಯನೊಳಡುರ್ತು ಮಾಱಾಂ
ತಿಱಿವುದು ನೆಯಮಲ್ತು ವಿನಯಮಲ್ತೆಂತಕ್ಕಂ
ನೆಱಿಯದೆ ಬುದ್ಧಿಯ ಪೆಂಪಂ

ಮೆಱೆಯದೆ ಮುಳಿದಿಱಿದು ಸತ್ತು ಕಿಡದಿರು ಮರುಳೇ ೬೯

ಊನನಧಿಕಂಗೆ ಮುಳಿದ ಸ
ಮಾನಂ ವಿಗ್ರಹಮನೊಡರಿಸಲ್ಕಕ್ಕುಮೆ ಪೇೞ್
ನೀನವನೊಳಿಱಿದು ಸಾಯದಿ
ರಾನೆಯೊಳೊಡೆಕೊಂಡಮಾಡಿ ಗೆಲ್ದವರೊಳರೇ (?) ೭೦

ದೇವರ್ ದಯಗಿಡುವಂತಾ
ನೇವಿರಿಯೆಂ ತಂದೆನೆನ್ನ ಬಟ್ಟಲೆಯಂ ನೀ
ನೋವುದೆ ಕೊಳ್ಳೆಂದೆಱಗಿದೊ
ಡಾ ವಿಭು ಕರುಣಿಸುಗುಮಲ್ಲದಂದೇವಾೞ್ವೇ ೭೧

ವ॥ ಅಂತಾತನಟ್ಟಿದ ಕರುಣಮುಂ ನಮ್ಮ ಪೇೞ್ದ ಬುದ್ಧಿಯುಮಂ ಕೈಕೊಳ್ಳದು ಕೊಳ್ಳದಂತಾವ ಬಲಗರ್ವಮಾತನಿಂ ಮುನ್ನಂ ನಂಬವೇಡಾ ನಂಬಿ ಬಂದೆಯಪ್ಪೊಡಂ ಮಾತಂ ಗಮನಿಸನಱಿಪಿದಪ್ಪೆಮೆಂದು ಕೇಳೆಲೆ ಬಲದೇವನೆಂಬಣ್ಣಲೆ

ಕಂ॥ ನೇಗಿಲುಳಲೊಳ್ಳಿತದು ಪಿಡಿ
ದಾಗಳುಮೊಕ್ಕಲಿಗನಂತೆ ಕಪ್ಪಡಮುಟ್ಟಾ
ಳಾಗಿರ್ದೆಮ್ಮರಸನ ಪೊಱ
ವಾಗಿಲನೋಲಗಿಪುದೊಳ್ಳಿತವಱಿಂದಿರಿವೋ ೭೨

ವ॥ ಎಂಬುದಂ ಹರಿ ಕೇಳ್ದು ಪೆರ್ಗಡೆತನಂ ಬಂದಂಗೆ ಮುಳಿಯಲಾಗ ತನ್ನಂ ತಾಂ ಪೊಗಟಲ್ಕಾಗದೆಂದು ಕೆಮ್ಮಗಿರ್ದೊಡಂತೆ ಪೆಟ್ಟುವೆರ್ಚೆ ನುಡಿಯೆ ಹರಿಯ ಬಲದ ದೆಸೆಯೊಳಿರ್ದವಷ್ಟಂಭದಿಂ ಧರ್ಮಜಂಗಿಂತೆಂದಂ

ಕಂ॥ ಕುಲಭುಭೃತ್ಪತಿಯೊಳ್ ಮು
ನ್ನೆಲನಂ ಜೂಜಾಡಿ ಸೋಲ್ತುದಲ್ಲದೆ ಮತ್ತಂ
ನೆಲಸೋರ್ತ್ತಡಂಗಿ ಬರ್ದ
ಣ್ಣಲೆ ಪೇಱ ನೀನುಮಿಱುವ ಬಗೆಯಿಂ ಬಂದಾ ೭೩

ವ॥ ಎಂದು ನುಡಿದು ಪೆರ್ಗಡೆಯ ಮಾತಂ ಭೀಮಂ ಕೇಳ್ದು ಮಸಗಲ್ ಬಗೆದುಬಲದೇವಸ್ವಾಮಿಯ ಕಣ್ಣಱಿದು ಮಾಣೆ ಭೀಮನುಮನಿಂತೆಂದಂ

ಕಂ॥ ಪಿಡಿದ ಬಡಿ ತಿಣ್ಣಮಾಂ ಬ

ಲ್ದಡಿಗನೆನೆಂದಡ [ಱು]ವಂದೆ ಚಕೇಶ್ವರನೊಳ್
ಕಡುದೊಡ್ಡಿತಾದ ಮಸಕಮ
ದುಡುಗಮೆ [ಸಲೆ] ಜಗದೊಳಿನ್ನ ವಣಕಮುಮೊಳವೇ ೭೪

ವ॥ ಎಂದಂತೆ ನೋಟ್ಟರ್ಜುನನಂ ಕಂಡಿಂತೆಂದಂ

ಕಂ॥ ಇವನೆಮ್ಮರಸಂಗಾಳ
ಪ್ಪವನಾಳಾಗಿರ್ದ ಕರ್ಣನೆಂಬಣ್ಣನ ಕೀ
ಳ್ಪವ [ನ]ದೊರೆಯಲ್ಲ [ಮಿಂ]ತ
ಪ್ಪವರ್ಗಳನೊಡಗೊಂಡ ಬಂದನೇ ಕಲಿಯಣ್ಣಂ ೭೫

ವ॥ ಅಂತರ್ಜುನನುಮನಲೆದಾತನ ಕೆಲದೊಳರ್ದ ನಕುಳನಂ ಕಂಡಿಂತೆಂದಂ

ಕಂ॥ ಏಳಿದ ಗಂಡರನಿವರಂ
ಕಾಳೆಗಕೆ ಸರ್ದೆಯ್ದಿದಿರ್ಚಿ ಬಿಡದಡೆ ಮತ್ತಂ ಗೋ
ಪಾಳಕ ನಿನಗಿದು ಪೊಲನೇ
ನಾಳಿದವಾಳ್ಗೊಂಡು ಕಾಳೆಗಂ ಗೆಲೆವಂದಾ (?) ೭೬

ವ॥ ಎಂದವರ ಪೆಱಗಿರ್ದ ಉಗ್ರಸೇನ ಮಹಾರಾಜನಂ ಕಂಡಿಂತೆಂದಂ

ಕಂ॥ ಅಸಿಪಂಜರದೊಳ್ ಮುನ್ನಂ
ಕುಸಿದಿರ್ ಸೆಱೆಯಿಟ್ಟು ನೆಲನನಾಳ್ದಂ ತನಯಂ
ನಿಸದಮೆ ಮಗನಂ ಕೊಂದುಂ
ಗೊಸೆದಾಳಾದಣ್ಣ ನೀನುಮಿಱಿಯಲ್ ಬಂದಾ ೭೭

ವ॥ ಎಂತೀತಂಗೆ ತಲೆ ನೆರವಿಂಗವಂದೇಳಿದರನೆನಿತಂ ನುಡಿವುದೆನೆ ಹರಿಯೆಂದಂ ನಿನಗೆ ಮುಳಿವುದೆಮಗೆ ಪಱಿಯಲ್ಲಿದಿರ್ದೊಡೇಕೆ ಮಾಣ್ಬೆಯಿನ್ನುಂ ನುಡಿ ಬಾಱೊದ್ದಿರಂಜಡಿಯಲಾಗೆನೆ ಪೆರ್ಗಡೆಯೆಂಗುಂ ನೀಂ ಮನದೊಳೇವಯ್ಸಿಯುಂ ಭಾಷೆಯೊಳೊತ್ತಿ ನುಡಿದಪೆಯೆಮ್ಮ ಪೇಟ್ದಿ ಕಜ್ಜಮನೊಲ್ಲದಂತಾವಳವಿನೊಳೊಲ್ಲೈ

ಕಂ॥ ನಿನಗೆತ್ತಣವೊ ಗೋವುಳಿ
ಗನ ಮಗನ್ನೈ ಪಚ್ಚಪಸಿಯ ಗೋವನೆಯಾಗಿ

ರ್ದನಿತನುಂ ನೀ [ಮೆನಿಸು]
ರ್ವನದಿಂದೇಳಿದನನಿಱುವುದಧಿಕನನಿಱುವಾ

ವ॥ ಎನೆ ಸತ್ಯಕಂ ಮುಳಿಯಲ್ ಬಗೆದೊಡೆ ವಸುದೇವನೆಂದನೀತಂಗೆ ಮುಳಿವೆಯಿತನಾತನಾಗಿ ಜಡಿದಪ್ಪೊನಾ ತಂಗೆ ಗಜಱಲಿನ್ನೆಗಮೊಪ್ಪ೨[ಡೇ]೨

ಕಂ॥ ಕರಿಪತಿಗಳೊಕ್ಕವೇ ಕೇ
ಸರಿಯ ಸರಂಗೇಳದೆಡ್ರ್ದಡೆ ಧರಣೀ
ಶ್ವರನಪ್ಪ ಜರಾಸಂಧಂ
ಹರಿ ರಣಡೊಳಿದಿರ್ಚದನ್ನೆಗಂ ಗರ್ಜಿಸವೇ ೭೯

ವ॥ ಎಂದ ಮಾತಂ ಹರಿ ಮನದೊಳೆ ಮೆಚ್ಚಿ ನೀಮಾರುಮೇನುವೆನವೇಡ ಕೇಳೆಲೆ ಪೆರ್ಗಡೆ ನೀನೆಂಬಂತಾಮೇವಿರಿಯೆವೆಮ್ಮ ಕಿಱುಕುಳರಪ್ಪುದನೆ ಬಗೆಯದೆ ಪದುಳಮಾಗಿ ಕಾದಲ್ವೇಱೆಂದವರನತಿಪ್ರಿಯಂಗೆಯ್ದು ಕಳಿಪಿ ನಾಳೆ ಕಾಡುವಮೆಂದು ಸಮ ಕಟ್ಟಿ ರಣಭೂಮಿಯಂ ಸಮಱಲ್ವೇಱ್ದು ಸಂಗ್ರಾಮಭೇರಿಯಂ ಪೂಯ್ಸಿ ಇಷ್ಟ್ದೇವ ತಾರ್ಚನ ಪುರಸ್ಸರಂ ಶಾಙ್ಗ್ರಾಯುಧಮಾದ್ಯನೇಕಾಯುಧಮಂ ಪೂಜಿಸುತ್ತಿರ್ದನತ್ತ ಜರಾಸಂಧನುಂ ಪೆರ್ಗಡೆಗಳ್ ಪೀಗಿ ಬಂದ ಮಾತಂ ಕೇಳ್ದು ಮುಳಿದು ವಿಜೃಂಭಿಸಿ ಕೇಳಿಮಿಂ ಪೆಱಡು ಮಾತಿನೊಳೇಂ

ಕಂ॥ ಕರಮೇಳಿದರಂ ಕೊಲ್ವೆನೆ
ಕರುಣಿಪೆನೆಂದಟ್ಟ ನೋಡಿದೆಂ ಗೆಲ್ಲದೊ [ಳಿಂ]
ಹರಿವಂಶತರೂನ್ಮೂಳನ
ಕರನಪ್ಪೆಂ ನಾಳೆ ಕಾವ ಗಂಡರುಮೊಳರೇ
೮೦

ವ॥ ಎನೆ ಸಭಾಸದರೆಂದರ್ ದೇವ ನೀಂ ಮುಳಿವೊಡಂ ಗಾಳಿ ನಂಜಪ್ಪಡಮಾರ್ ಕಾವರಾರ್ ಬರ್ದುಂಕುವರೆನುತಿರ್ದಿಂ ಬಱಯಂ ದುರ್ಯೋಧನಂ ಮೊದಲಾಗೆ ತನ್ನ ಪಡೆಯೊಳುಳ್ಳರಸುಮಕ್ಕಳೆಲ್ಲರುಮಂ ಬರಿಸಿ ನಾಳೆ ಕಾಡುವಮೆಂದು ಸಮಕಟ್ಟಿ ಕರ್ಣಗೆ ಸೇನಾಪಾಅತಿಪಟ್ಟಂಗಟ್ಟಿ ರಣಭೇರಿಯಂ ಪೊಯ್ಯಾಲ್ವೇಱ ಸಮರಭೂಮಿಯಂ ಸಮಱವಂತಾಗಿ ನಿಯಮಿಸಿ ಕೆಲರಂ ತಟದ್ಘೋಷಣೆವಿಡಿಸಲ್ವೇಱ ಕೆಲರನಿರುಳೊಳ್ ಕೊಳ್ಳಿ ವೀಸಿಸಲ್ವೇಱ ಚಕ್ರಂ ಮೊದಲಾಗಾಯುಧ ವಾಹನಂಗಳನರ್ಚಿಸುತ್ತಮಿರ್ದರಂದಿನ್ ದೆವಸಮೆರಡುಂ ಪಡೆಯ ಸುಭಟರಿಷ್ಟದೇವತಯುಧಂಗಳಂ ಪೂಜಿಸುತ್ತಂ ದಾನ ಸನ್ಮಾನಂಗಳಂ ವಿರಾಜಿಸುತ್ತಮಿರ್ದರ್ ಕೆಲ್ಲರನುವರಂಬಡೆದುದಕ್ಕೆ ರಾಗಿಸುತ್ತಂ ನಲ್ಲ ರೊಡನೆ ಭೋಗಿಸುತ್ತಮಿರ್ದರ್ ಕೆಲರ್ ನುಡಿವಳಿಗಳಂ ಪೊಗಱುಸುತ್ತ [ಂ] ಮೆಚ್ಚವಣಿಗೆಯವರಂ ತೆಗಱುಸುತ್ತಮುರ್ದರ್ ಕೆಲರ್ ವೀರ್ಸ್ರಂನ್ಯಾಸಿಗಳಾಹಲುಂ ರಿಣಮಂ ನೀಗಲುಮಿರ್ದರ್ ಕೆಲರ್ ಪೂಣ್ಕೆಯನೊಲ್ಲದೆಯುಮನುವರ

ಚಿಂತೆಯಿಲ್ಲದೆಯು ಮುರ್ದೀಗಳಾಗಿದಿರೆ ರೂಪಗಂಡಡಂ ಕೆಯ್ದುಗೊಂಡಡಮಱಿಯಲಕ್ಕುಮೆನುತಿರ್ದರ್ ಕೆಲರ್ ಕರ್ಣನ ಬೀಡಿನಲ್ಲಿ ಕೆಲರ್ ತುಱುಲಸಂದಿಕೆಯ ಪಸುಗೆಗಳಂ ಮುನ್ನಱಿಯದೆ ನೆಗೞ್ದೀಗಳಣ್ಮಿ ಸತ್ತೊಡೆ ಕಲಿಯಕ್ಕುಮೆಂಬೈ ಕಲಿತನಂ ತುಱುಲಸಂದಿಕೆ ಯೊಳಗಲ್ತೆಯೆಂದೊಡೊಂದು ಗುಣಂಗಳಂ ನೆಱಿಯೆ ಕೈ ಕೊಂಡು ನೆಗೞ್ದವನಲ್ಲದೆ ತುಱುಲಸಂದನೆಂಬ ಪೆಸರಂ ಪಡೆಯನದೆಂತೆನೆ

ಕಂ॥ ಕಲಿತನವಭಿಮಾನಂ ನಿ
ರ್ಮಳ ಧರ್ಮಂ ತ್ಯಾಗಮೆಸೆವ ಸತ್ಯಂ ಶೌಚಂ
ನೆಲಸಿರ್ದೀ ಗುಣ ಮೂಱುಂ
ನೆ ^[ಲೆ]^ಯುಳ್ಳಂ ತುಱು ^[ಲಸಂದನಲ್ಲದ]^ಡಲ್ಲಂ ೮೧

ಮ॥ ನೆಲನೆಂತೀ ಸಚರಾಚರಪ್ರತತಿ ನಿಂತಾಧಾರಮಂ ಮಾೞ್ಕುಯಿಂ
ಕಲಿಯಪ್ಪಿಂದು ಗುಣಂ ಸಹಸ್ರಗುಣವಿಂಗಾಧಾರಮೆಂಡೊಳ್ವಿನ
ತ್ತೂಲೆದೊಪ್ಪಿರ್ದ ತಪೋಧನಂಗೆ ತುಱುಲಾಳಪ್ಪೊಂಗೆ ಕೇಳಿಂ ಕರಂ
ಚಲದೆಂತುಂ ಕಲಿಯಾಗವೇೞ್ಕುಮದಱುಂ ಶ್ರೀ ವೀರಸಿದ್ಧಾಂತದೊಳ್ ೮೨

ಕಂ॥ ಎಲ್ಲ ಗುಣಂಗಳ್ ಮಣ್ಣಿಂ
ದಲ್ಲದೆ ಕರಮೊದವಿಬಾರವದಱುಂದಂ ಕೆ
ಚ್ಚಿಲ್ಲದೆ ಮರನುಮ್ಮ ಕಲಿತನ
ವಿಲ್ಲದ ನರನುಂ ಭವಕ್ಕೆ ನಿತ್ತರಿಸುಗುಮೇ ೮೩

ಚಂ॥ ಅಱುವೆಡೆಯಲ್ಲಿ ತಕ್ಕುದಱುದೇವೆಡೆಯಲ್ಲಿ ನಿಜಾಭಿಮಾನಮಂ
ಪೆಱಿದೆಡೆಯಲ್ಲಿ ಶೌಚಗುಣಮಂ ಸಲೆ ಕಾವೆಡೆಯಲ್ಲಿ ನನ್ನಿಯಂ
ನಿಱುಪೆಡೆಯಲ್ಲಿ ಧರ್ಮಡೊಡವಿಂದೆ ಕುಸಂಸ್ಕೃತಿ ಬಂಧಮೆಲ್ಲಮಂ
ಪಱುವೆಡೆಯಲ್ಲಿ ಚಾರುಭಟನಣ್ಮುವುದಣ್ಮು ಗುಣಂಗಳಾಶ್ರಯಂ ೮೪

ವ॥ ಇಂತೆಲ್ಲಾ ಗುಣಕ್ಕಮಧಿ ಷ್ಠಾನಮಾಗಿರ್ಪ ಕಲಿತನಮಂ ಮುನ್ನಮುಂಟು ಮಾಡುವುದು[ಂ] ಬಱುಯಂ

ಕಂ॥ ಅಭಿಮಾನದಿಂದ ಮನುಜಂ
ವಿಭು ಕಲ್ಲಿಯಾದೊಡಮೊಳಗೆ ^[ನೇ]^ ನೃಪರೊಳ್
ವಿಭವದೊಳೆಡಱೊಳ್ ಕಾವುದೆ
ಸುಭಟಗುಣಂ ದೀನವೃತಿ ತುಱುಲಾಳ್ತನಮೇ ೮೫

ಮ॥ ಎಡಱೂದಂದಳಿಪುಣ್ಮೆ ಪೋಗಿ ಪೆಱರಂ ದ್ರವ್ಯಂಗಳಂ ಭೇಡಿಕೊಂ
ಡಡೆ ಮಿಕ್ಕಿರ್ದಭಿಮಾನವೋಡುಗುಮಡೇನೋ ದೋಷಮಲ್ತೆ ಗುಣ
ಕ್ಕೆ ಡೆಯಾಡೊಳ್ತುಱುಲಾಳ್ದವಸಿಗಂ ಮುಂ ಭೈಕ್ಷಮಂ ಬೇಡಿಕೊ
ಳ್ವಡೆ ಕೊಳ್ಗರ್ಥಬೇಟಮಾಡೊಡಱುಗುಂ ನಾಣ್ಮತ್ತಯುಂ ಗಂಡರೇ ೮೬

ಕಂ॥ ಜ್ಞಾನಂ ತಪಸಿಗೆ ಲಸದಭಿ
ಮಾನಂ ತುಱುಲಾಳ್ಗೆ ಸಾರಮಪ್ಪು ದಱುಂದ
ಜ್ಞಾನಿ ತುಱುಲಾಅಳೆನೆಂದುಂ
ದೀನಂ ತುಱುಲಾಳೆನೆಂದುಮೆಸೆವರೆ ಜಗದೊಳ್ ೮೭

ಉ॥ ಕೇಳಿಕದಲ್ಲಿ ಸೂಳೆಮನೆಯಲ್ಲಿ ನಿಜಾಲಯದಲ್ಲಿ ಭೂಪನಾ
ರ್ತಿವೆಡೆಯಲ್ಲಿ ಜೂದಿನೆಡೆಯಲ್ಲಿ ಕರಂ ಪಸಿದಲ್ಲಿ ಪಣ್ಫಲಂ
ತೀವಿದ ತೋಟದಲ್ಲಿ ಬೆಳೆದೊಪ್ಪುವ ಕೆಯ್ವೊಲದಲ್ಲಿ ಪೊರ್ವ ನಿಂ
ದಾವಗಮಾಗೆ ಕವುದಭಿಮಾನೊಳ್ತುಱುಲಾಳ್ ನಿರಂತರಂ ೮೮

ವ॥ ಅಂತಭಿಮಾನಮೆಂಬ ಗುಣಮನೆಲ್ಲೆಡೆಯೊಳಂ ಕಾವುದಲ್ಲಿಂ ಬಱಯಂ

ಕಂ॥ ತನಗೆ ಮುಳಿದಿಱುಯಲೆಯ್ತ
ಪ್ಪನನಲ್ಲದೆ ಕೆಮ್ಮನಿರ್ದು ಬಾಳ್ವಿ ಸು ⌈[ಗುಣನಂ]⌉
ಮುನಿದು ಕೊಲಲಾಗದೆಂಬುದಿ
ದನುಪಮ ಗುಣಗಣ[ಮೆ] ಟುಱುಲಸಂದಾರ ಧರ್ಮಂ ೮೯

ಶಾ॥ ಬೆನ್ನಿತ್ತಾತನನಳ್ಕಿ ಕೈಮುಗಿದು ಬಾಯ್ವಿಟ್ಟದೊರ್ನಂ ತನ್ನೊಳಿಂ
ಬನ್ನಂ ಕೆಯ್ಮಿಗೆ ಪುತ್ತನೇಱುದವನಂ ಪುಲ್ಗಚ್ಚಿ ನಿಂದಾತನಂ
ತನ್ನಾಯಂಗಿಡೆ ಬೆರ್ಚಿ ಪೋಗಿ ಜಲಮಂ ಪೊಕ್ಕಾತನಂ ಶೌರ್ಯಸಂ
ಪನ್ನಂಗೊಳ್ತುಱುಲಾಳ್ಗೆ ಕ್ಕೊಲ್ಲದುದೆ ತಾಂ ಧರ್ಮಂ ಬಲಂ ವೀರರಂ ೯೦

ಕಂ॥ ಬ⌈[ಱುಬ]⌉ನನೇಳಿದನಂ ಮೆ
ಯ್ಯಱುಯಡೊನಂ ಬೆರಲನಳಿಪಿ ಕರ್ಚಿಡೊನಂ ಕಾ
ಲ್ಗೆಱಗಿದನನಿಱುಯಲಾಗದಿ
ದಱುಕೆಯ ಕಡು ತುಱುಲಸಂದರಪ್ಪರ ಧರ್ಮಂ ೯೧

ಚಂ॥ ಅಱುಯಿಱುಯಲ್ಕಱಲ್ ಪರಿದು ಮುತ್ತಿಕೊಳ್ಳ್ಲಿ ಬಿಡದಾವನಪ್ಪೊಡಂ

ಸೆಱೆಯಿಡಲುಂ ಪಿಸುಣ್ನುಡಿಯಲುಡ್ಡಿಸಿ ಸೂಱೆಗೊಳಲ್ ವಿಶಿಷ್ಟರಂ
ಮಱುಗಿಸಲೆಂತು ಮುಕ್ಕಲಱೆಯೇಱುಱುಯಲ್ ಕರಮೇಳಿದರ್ಕಳಂ
ಪಱುಪಡೆ ಬಿಗ್ಗಿ ಸಲ್ಕಣ್ಮುಮಾಗದು ಕೇಳ್ ತುಱುಲಾಳ್ ಧರ್ಮಮಂ ೯೨

ವ॥ ಧರ್ಮಮೆಂಬ ಗುಣಮನಿಂತೆ ಸಲಿಸುವೊಂದು ತುಱುಲಸಂದನದಲ್ಲದೆಯುಂ

ಕಂ॥ ಕುಡಲಿಲ್ಲ ತಕ್ಕುದೆಂಬೊಂ
ದೆಡೆಯೆಳ್ ತನ್ನಳ್ವಿಯಿಂದಮಿಯದ ಲೋಭಂ
ಕಡುವಂದೆಯ ಲಕ್ಕಮದೇ
ಪಡೆಮಾತೆಂದಱುದುದಾರನಪ್ಪೊಂ ತುಱುಲಾಳ್ ೯೩

ಮ॥ ಮನುಜಂಗರ್ಥಮೆ ತಳ್ತು ಪತ್ತಿದ ಬಹಿ:ಪ್ರಾಣಮಂ
ಮನಡೊಳ್ ಚಿಂತಿಸದೀವನಲ್ಲದೆ ನಿಜಾಂತ:ಪ್ರಾಣಮಂ ನೆಟ್ಟನೀ
ವನೆ ಮತ್ತಂತಱು ಿ[ದೀ]ಿವೆನೆಂಬ ಗುಣಮಂ ಕೆಯ್ಕೊಂಡು ತಳ್ತಿರ್ದೊಡಾ
ತನೆ ವೀರಂ ರಣಮಾರನಾತನೆ ಜಯೋದಾರಂ ಮನುಷ್ಯರ್ಕಳೊಳ್
೯೪

ಕಂ॥ ರಾಗಂ ಪ್ರಿಯತಂಗೆ ದನ
ತ್ಯಾಗಂ ತುಱುಲಾಳ್ಗೆ ಯೋಗಮೊಳ್ದಪಸಿಗೆ ಮ
ತ್ತಾಗಲೆವೇಱುದದಲ್ಲಡೊ
ಡೇಗೆಯ್ವುಡೊ ಗೆಯ್ಯದಣ್ಮು ತಪಮೆಂಬಿನಿತಂ ೯೫

ಶಾ॥ ಇಂತೊಂಗಲ್ಲದೆ ಧರ್ಮದೊಳ್ಪೆಸೆಗುಮೇ ತಕ್ಕಲ್ಲಿ ತಗು
ಳ್ದೀತಂಗಲ್ಲದೆ ಕೀರ್ತಿ ತಾಂ ಪರೆಗುಮೇ ಮೋಹಂ ಭಯಂದಕ್ಕುಮೆಂ
ದಿತ್ತಂಗಲ್ಲದೆ ಗಂಡವಾತೆಸೆಪೊಂದುದಾರಗುಣಮಂ ಧರ್ಮಂ ಯಶಂಗಂಡು ಮೆ
ಯ್ವೆತ್ತಿರ್ಪೊಂತೆಸೆಪ್ಪೊಂದು ದಾರಗುಣಮಂ ತಾಳ್ದಿರ್ಪುದಂತಂಬರಂ ೯೬

ವ॥ ತ್ಯಾಗವೆಂಬ ಗುಣಂ ತುಱುಲಾಳ್ಗಮೋಘಂ ಬೇಱುದೆಂದು ಮತ್ತ ಮಿಂತೆಂದಂ

ಕಂ॥ ಸತ್ಯಗುಣಮಾಱುಗುಣಡೊಳ
ಮತ್ಯಂತ ಮಹಾವ್ರತಂಗಳೆಂಬಯ್ದಱೊಳಂ
ಸ್ತುತ್ಯಮದುಂಟಾದಂದೌ
ಚಿತ್ಯಾಳಂಕಾರಮೆರಡು ಭವಕಂ ಸಾರಂ ೯೭

ಮ॥ ನುಡಿಯಂ ತಪ್ಪಿದವಂಗೆ ತ್ಪ್ಪುಗುಮೆ ಪೇೞಿಸಾವೆಂತುಮಾ ತಪ್ಪಿನೊಳ್
ಪಡೆದಂದಾ ಧನಮಂತೆ ನಿಂದಪುದೆ ಕೇಳೆತ್ತಾನುಮಂತೋಡಿ ನಿಂ
ದಡಮೇಂ ದುರ್ಗತಿಯಾಗದಿರ್ದಪುದೆ ಪೇೞ ಮೆತ್ರೇತೞನಿಂ
ಕಿಡೆವರ್ದಾಂತಿೞಿವಾಣ್ಮನೆಂತು ತುೞಿಲಾಳಕ್ಕುಂ ಮಹಾಪಾತಕಂ ೯೮

ಕಂ॥ ಪುಸಿದವನುಂ ರಣಮುಖದೊಳ್
ಪುಸಿದವನುಂ ಕೇಡಿನೊಳ್ ಸಮಂ ಬಲಮೆನಲಿಂ
ಕುಸಿದವನೊರ್ವನೆ ಕೆಡುಗುಂ
ಪುಸಿದೊನ ನಂಬಿದನ ಕೇಡದಿಮ್ಮಡಿಯಲ್ತೇ ೯೯

ಉ॥ ಸ್ನೇಹದಿನಕ್ಕೆ ಬಲ್ಲಿದರಿನಪ್ಪ ಭಯಾಕುಳದಿಂದಮಕ್ಕೆದು
ರ್ಮೋಹದಿನಕ್ಕೆ ನಂಬಿದೆಡೆಯೊಳ್ ಪುಸಿ ಪೊರ್ದಿದನಂತೆ ತನ್ನ ಮಿ
ಕ್ಕೈಹಿಕಮಂ ಪರತ್ರೆಯುಮನರ್ದಿದನಾ ಕಡುಪಾತಕಂ ಮಹೋ
ಗ್ರಾಹವದಲ್ಲಿ ತಳ್ತಿೞಿಡೊಡೇಂ ತುೞಿಲಾಳ್ಗಳ ಲೆಕ್ಕಮಕ್ಕುಮೇ ೧೦೦

ವ॥ ಅದಱಿಂ ಸತ್ಯಮೆಂಬ ಗುಣಂ ತುೞಿಲಾಳ್ಗಮೋಘಂ ಬೇೞ್ಕು[ಂ]ಮತ್ತಂ

ಕಂ॥ ಪರಧನಮಂ ಅರವೊಪ್ಪುವ
ಪರವನಿತಾಜನಮನಳಿಪಿ ಕಳಲುಂ ಕೊಳಲುಂ
ದೊರೆಗಾಗದೆಂಬ ಶೌಚದ
ಭರಮುಂ ತಾಳ್ದಿದನೆ ತುೞಿಲಸಂದಂ ಜಗದೊಳ್ ೧೦೧

ಚಂ॥ ಪರವಧುಗೊಲ್ದು ವಿರಸಿರಿಗೊಳ್ವನಮನ್ಯಧನಂಗೊಳ್ಳ್ಕ ಕೊ
ಕ್ಕರಿಸದೆ ಕೊಂಡುಮೊಳ್ಪುಗೊಳ್ಳಿರ್ಪನುಮೇಂ ಜಗದೊಳ್ ಮರುಳ್ಗಳೋ
ತ್ವರಿತದೆ ಮೂಡಪೋಗಿ ಪಡುವೆಯ್ದುವೆನೆಂಬವನಂತೆ ಶೌಚಮಂ
ಪರಿಹರಿಸಿರ್ದುಬರ್ದಿೞಿಯಲೊರ್ಪಳಿಯಾಳ್ ತುೞಿಲಾಳ್ ಲೆಕ್ಕಮೇ ೧೦೨

ಕಂ॥ ಒತ್ತೆಗೊಳಲಿಪ್ಪಳುಂ ಪೆಱ
ಳಿತ್ತ ಕುಲಾಂಗನೆಯುಮಲ್ಲದುೞಿದವರೆಲ್ಲಂ
ಪೆತ್ತರ್ ಸೋ{[ದರರೆ}} ನಗೆಂ
ಬುತ್ತಮ ಗುಣಮಿಲ್ಲದಾತನುಂ ತುೞಿಲಾಳೇ ೧೦೩

ಉ॥ ಓಡಿದನೊಳ್ ಪರಾಂಗನೆಉಊಳೋತೊಡಗೂಡಿದನೊಳ್ ಸರಾಗದಿಂ
ಕೂಡುವಳೆಂಬ ಡೊಂಬೆಸಿರಿ ಪತಕಿ ನಾಣಿಕೆಟ್ಟಬೂತು ನಾ
ಱೋಡೆಯವಳ್ಗದಕ್ಕುಮುತುದಾವಳುಮೊಲ್ವಳೆ ಕಿರ್ತಿಯೆಂಬವಳ್
ನೋಡಳು ನಿಂದು ಬೀರಸಿರಿ ಕೇಳಳವಂದಿರ ಮಾತನಪ್ಪಡಂ ೧೦೪

ವ॥ ಇದು ಶೌಚಗುಣದೊಳ್ವದಱಿಂತಾಱುಗುಣಮಿಲ್ಲದೊಂ ತುಱುಲಸಂದ ನಾಗನಿಂತಿಪ್ಪತ್ತೆಂಟು ಮೂಲಗುಣ ಮಿಲ್ಲದೊಂ ತಪಸ್ವಿಯಾಗನೆಂಬುದು ವೀರಸಿದ್ಧಾಂತ ಮಂತಪ್ಪ ಗುಣಂಗಳನುಳ್ಳಾತಂ ಮೇಗಾಸನಕ್ಕ್ಕ ಕೆಳ್ಳಗೆ ಪೊಲೆಯ್ನಕ್ಕಾವ ಕುಲಮಾದೊಡಂ ತುಱುಲಸಂದನೆಂಬೊನಕ್ಕುಮಂತಪ್ಪಾತಂಕಿಱುಕುಳ್ಳನ್ ಕಡ್ಡನುಮಾಗಲಾಗ ಧೈರ್ಯವಂತನಪ್ಪುದೆನೆ

ಕಂ॥ ಅಳಿಪಿ ಕಿಱುದಕ್ಕೆ ಕೆಮ್ಮನೆ
ಗಳಗಳಿಸುತ್ತೇಳಿದರ್ಕಳೊಳ್ ಬಿಡದೆ ತಗು
ಳ್ದಳಿಪಳಿಯಾಡುವ ಿ[ನೆಂತುಂ]ಿ
ತುಳಿಯಕ್ಕುಂ ತುಱುಲಸಂದನಕ್ಕುಮೆ ಧರೆಯೊಳ್ ೧೦೫

ಚಂ॥ ಅರಸರ ಪಾಱುವೆಂಡಿರೊಳಡಂಗದ ರಾಜಸುತರ್ಕಳೊಳ್ ಬಱು
ಕ್ಲರಸುಗಎಯಲ್ಕೆ ಪಾರ್ವ ಕಡುಜೂಂಟರೊಳೊಂದದೆ ಮಿಕ್ಕ ನಂಟರೊಳ್
ಪೊರೆದುಮುಪಾಯಡೊಳ್ ನಡೆವ ದೈತ್ಯರೊಳುದ್ದತರಪ್ಪ ಭೃತ್ಯರೊಳ್
ಕರಮೆ ತಗುಳ್ದು ಪತ್ತಿ ತುಱುಲಾಳ್ಗೆಡೆಗೊಂಡಡೆ ದೋಷಮೆಯ್ದದೇ ೧೦೬

ವ॥ ಅದಱಿಂ ತಪಸ್ವಿ ಪಾಪಕ್ಕಂಜಿ ನಡೆವುದು ತುಱುಲಸಂದಂ ದೋಷಕ್ಕಂಜಿ ನಡೆವುಡೆಂಬುದಾಗಮಮಾಗಿಯುಂ ತಪಸ್ವಿ ಪಾಪಪ್ರಮಾದಮಾದೊಡಂ ಪ್ರಾಯ ಶ್ಚಿತ್ತದಿಂ ಕಳೆಗುಂ ತುಱುಲಸಂದಂಗೆ ದೋಷಮೆನಿಸು ಬಂದು ಮುಟ್ಟಡೊಡಂ ಪುಳಿ ಮುಟ್ಟದ ಪಲ್ ಮಗುಱು ಪಾಲಾಗದಂತಾತನಣ್ಮೆಸತ್ತೊಡಂ ತುಱುಲಸಂದನಾಗನಣ್ಮುಪಂದಿಗಂ ಪುಲಿಗಮುಂಟವರೊಳ್ಪಸುಗೆಯಱುವನೆಗಾಱ್ತೆಯುತೊಲಗಿ ಿದೋಷಮೆಂಬುದುಮುಂಟಾಸುಭಟನದ ಱುಂದಸಿಧಾರಾವ್ರತಿಯಾದನಂತಾರ್ಪಾತ ನನುವರದೊಳ್ ಕುದುರೆಯೇಱುದಾತನಾನೆಯೇಱಲಕ್ಕುಮಾನೆಯನೇಱುದಾತಂ ಕುದುರೆಯೇಱಲಾಗ ಬಿಲ್ವಿಡಿದಾತನಡ್ಡಗಯ್ದು ವಿಡಿಯಲಕು ಿ[ಮ]ಿ ಡ್ಡಗಯ್ದುವಿಡಿದಾತಂ ಬಿಲ್ವಿಡಿಯಲಾಗ ಬಿಲ್ವಿಡಿಡೊನುಗಿವೊಡೆ ಬಿಲ್ವಡೆಯಾಗ ತಗರುಗಿವಂತುಗಿವುದು ಬೆನ್ನಿತ್ತುಗಿಯಲಾಗಘೋಳಾ ಿ[ಯಿಲ]ಿ ನುಲ್ಲಟಿಸುವಲ್ಲಿ ತನ್ನಾಯುಧ[ಮಂ] ತುರಗಮುಂ ಬೀಱು ಬರಲಾಗಾನೆಯೇಱುದೊನಾನೆ ಬೆರ್ಚಿಬೆದಱು ಪರಿವೊಡಾನೆಯಂ ಕೊಂದು ಮೂಱುರ್ದುಂ ನಿಲಲೆವೇೞ್ಪುದಡ್ಡಗೆಯ್ದುವಿನ ಕಾಲಾಳ್ ಪೆಱಗಡಿಲಾಗ ಕೊಳ್ಗೊಳ್ದೊಳ್ ಬೀೞ್ವಾತಂ ಮೆ ಯ್ಯಱಿಯದೆ ಬೀೞ್ವಾಗಳಾಳ್ದನಲ್ಲಿ ಸತ್ತೊಡಳೆಂತುಂ

ಬಾತಲಾಗದೆಂದಿಂತು ವೀರಸಿದ್ಧಾಂತದ ಪಸುಗೆಯಂ ಕಿಱುದಱೊಳೆ ನುಡಿಯುತ್ತಿರ್ದದಂ ಕೇಳ್ದು ಮೆಚ್ಚಿ ಕೆಲರ್ ಮುನ್ನಾಱುಯಡೊಡಮಿನ್ನಱುದು ನೆಗಳ್ವಿಮೆಂದು ಜೋಳದ ಪಾಱುಗಂ ನುಡಿವಳಿಗಂ ಯಶಕ್ಕಂ ಗತಿಗಂ ತಕ್ಕ ಸಾವಾವುವವಱೊಳಾವುದನಾರ್ ಮೆಚ್ಚುವಂದಮದನೆ ಪರಿಚ್ಛೇದಿಸಿ ನುಡಿಯುತ್ತಿರೆಯಿರೆ